




E-Bengaluru Beragu

MAG (2) PRB/CR/36/24-25
T/KN2024/2076

# ಈ-ಬೆಂಗಳೂರು ಬೆರಗು

ಸಂಪುಟ: 2 Vol: 2 ಸಂಚಿಕೆ: 7 Issue: 7 ನವೆಂಬರ್ 15 - 30 ಪುಟಗಳು: 12 Pages: 12 ಬೆಲೆ: 15.00 ರೂ.

## ಮೇಕೆದಾಟು ಯೋಜನೆ ತಮಿಳುನಾಡು ಅರ್ಜಿ ವಜಾ




## ಬಿಹಾರದಲ್ಲಿ ಎನ್‌ಡಿಎ ಮೈತ್ರಿಕೂಟಕ್ಕೆ ಐತಿಹಾಸಿಕ ಗೆಲುವು






## ದೆಹಲಿಯಲ್ಲಿ ಉಗ್ರರ ದಾಳಿ: ಕಾರ್ ಬಾಂಬ್ ಸ್ಫೋಟದಲ್ಲಿ 13 ಮಂದಿ ಸಾವು



## ಮುತ್ತುರಾಜ್ ಕನ್ನಡ ಕಂಡ ಮಹಾನ್ ಚೇತನ



ಈ-ಬೆಂಗಳೂರು ಬೆರಗು
E-Bengaluru Beragu



| | | | | |
|---|---|---|---|---|
| 1. ಪತ್ರಿಕಾ ಸುದ್ದಿ | 2. ಬೆರಗು ಚುಂಬಕ | 3. ಜ್ಞಾನ-ವಿಜ್ಞಾನ-ಪರಿಜ್ಞಾನ | 4. ಮಾಧ್ಯಮ ಸುದ್ದಿ | 5. ಆಡಳಿತ ಸುದ್ದಿ |
| 6. ಸಂಗೀತ ಸಮಾರಂಭ | 7. ಸಭೆ ಸಾಹಿತ್ಯ ಕವನ | 8. ಹಣಕಾಸು ವ್ಯಾಪಾರ | 9. ಆರೋಗ್ಯ ಮತ್ತು ವೈದ್ಯಕೀಯ | 10. ಇತಿಹಾಸ ಪುಟಗಳಿಂದ |
| 11. ಜಾಲತಾಣ ಬೆರಗು | 12. ಯೂಟ್ಯೂಬ್ ಲೋಕ | 13. ಸಿನಿಮಾ ರಂಗ | 14. ಕ್ರೀಡಾರಂಗ | 15. ಸಂಪಾದಕರ ಪುಟ |

## ಮುನ್ನುಡಿ

**ವಿ**ಶಾಲ ಕರ್ನಾಟಕದ ಕನ್ನಡ ಓದುಗ ಅಭಿಮಾನಿಗಳಲ್ಲಿ ವಿನಂತಿಯ ಬಿನ್ನಹ...........


ಕನ್ನಡ ನಾಡಿನ ಸಹೃದಯ ಅಕ್ಷರ ಮಿತ್ರರ ಪ್ರೇರೇಪಣೆಯಿಂದ ಉದಯವಾಗಿ ಅತ್ಯಂತ ಸ್ಪರ್ಧಾತ್ಮಕ ಮುದ್ರಣ ಪ್ರಪಂಚ/ಜಾಲತಾಣ ಮಾಧ್ಯಮದಲ್ಲಿ ಶ್ರಮವಹಿಸಿ ಹೊರತರುತ್ತಿರುವ ನಮ್ಮ ಈ ಪ್ರಯತ್ನ ಯಶಸ್ವಿಯಾಗಲು ಉತ್ಸಾಸಿ ಹೃದಯಗಳಲ್ಲಿ ಈ ಬೆಂಗಳೂರು ಬೆರಗು ಪಾಕ್ಷಿಕ ಪತ್ರಿಕೆಯನ್ನು ಪ್ರೋತ್ಸಾಹಿಸುವಂತೆ **'ಈ ಬೆಂಗಳೂರು ಬೆರಗು'** ತಂಡದ ಪರವಾಗಿ ಕೋರುತ್ತೇವೆ.

ದಿನದ, ವಾರದ, ತಿಂಗಳ ಟ್ಯಾಬ್‌ಲಾಡ್ ಸರಳಿ ಪ್ರಚುರವಾಗಿ ಮಾರುಕಟ್ಟೆಯಲ್ಲಿ ಬಿಡುಗಡೆಯಾಗುತ್ತಿರುವ ಈ ಕಠಿಣ ಸಮಯದಲ್ಲಿ, ಪ್ರತಿ ತಿಂಗಳಲ್ಲಿ ಎರಡು ಪಾಕ್ಷಿಕಗಳನ್ನು ನಿಖರವಾಗಿ ಹದಿನೈದನೇ ದಿನವೇ ಅಂದರೆ ಪ್ರತಿ ತಿಂಗಳು 1ನೇ ದಿನಾಂಕ ಹಾಗೂ 16ನೇ ದಿನಾಂಕದಿಂದ ಬಿಡುಗಡೆ ಮಾಡಲು ಸಿದ್ಧಪಡಿಸಿ ತಮ್ಮ ಮುಂದಿಡಲೂ ಪ್ರಯತ್ನಿಸಲಾಗುವುದು.


ಈ ಸಮಕಾಲೀನ ಮುಕ್ಕಾಲು ಪಾಲು ಟ್ಯಾಬ್‌ಲಾಡ್‌ಗಳಲ್ಲಿ ಸಂಚಲನಾತ್ಮಕ ಸುದ್ದಿಗೆ, ಕೊಲೆ, ರಾಜಕೀಯ ವೈಷಮ್ಯ ಹೊಡೆಬಡೆದಾಟಗಳ ದಾಟಿಯಲ್ಲಿ ಬರಹ ಮತ್ತು ಲೇಖನಗಳಿಗೆ ಆದ್ಯತೆ ನೀಡಿ ರಂಗು ರಂಗಾದ ವಿಷಯಗಳನ್ನು ಮುದ್ರಿಸಿ ಸ್ಪರ್ಧೆ ಏರ್ಪಟ್ಟಿರುವ ಮಾರುಕಟ್ಟೆಯಲ್ಲಿ ಗಮನ ಸೆಳೆಯಲು ಇದಕ್ಕೆ ಭಿನ್ನವಾಗಿ ನಮ್ಮ ಈ ಬೆಂಗಳೂರು ಬೆರಗು ಹೊರತರಲು ಪ್ರಯತ್ನಿಸುತ್ತಿದ್ದೇವೆ.

ಆದರೆ ನಮ್ಮ ಈ ಪಾಕ್ಷಿಕ ಸಾಧ್ಯವಾದ ಮಟ್ಟಿಗೆ ಅಂತಹ ಸಂಚಲನ, ಕ್ರೈಂ, ಸೆಕ್ಸ್ ಉನ್ಮಾದ ವಿಷಯಗಳ ಆದ್ಯತೆ ನೀಡದೆ ಪ್ರಕೃತಿ, ಪ್ರೇಮ, ಸಾಹಿತ್ಯ-ಸಂಗೀತ ಲೇಖನ ಹಾಗೂ ಚಿತ್ರಗಳಿಗೆ ಆದ್ಯತೆ ನೀಡಿ ಪ್ರಚಾರ ಮಾಡಲು ಪ್ರಯತ್ನಿಸುತ್ತೇವೆ. ಈ ಪ್ರಯತ್ನಕ್ಕೆ ಸುವಿಶಾಲ ಬೆಂಗಳೂರು ಮತ್ತು ಸಹೃದಯ ಕನ್ನಡ ಓದುಗರ ಪ್ರೀತಿ, ವಿಶ್ವಾಸ, ಪ್ರೋತ್ಸಾಹ ಹಾಗೂ ಆರ್ಶೀವಾದಗಳ ಸದಾ ನಮ್ಮ ಮೇಲಿರಲಿ ಎಂದು ಬಯಸುತ್ತಾ.

ಸದಾ ನಿಮ್ಮ ಸೇವೆಯಲ್ಲಿ
**ಸಂಪಾದಕರ ಸಲಹಾ ಮಂಡಳಿ**



# ಮುತ್ತುರಾಜ್ ಕನ್ನಡ ಕಂಡ ಮಹಾನ್ ಚೇತನ



**ಕ**ನ್ನಡ ಸಿನಿಮಾ ರಂಗದ ಸುವರ್ಣ ಯುಗವನ್ನು ರೂಪಿಸಿದ ಅಪ್ರತಿಮ ವ್ಯಕ್ತಿತ್ವವೆಂದರೆ ಡಾ.ರಾಜ್‌ಕುಮಾರ್, ಅವರು ಕೇವಲ ನಟರಲ್ಲ. ಕನ್ನಡ ಸಂಸ್ಕೃತಿಯ ಪರಿಪಾಲಕರೂ ಆಗಿದ್ದರು. ಜನಸಾಮಾನ್ಯರ ಮನಸ್ಸಿನಲ್ಲಿ "ರಾಜ್‌ಕುಮಾರ್", ಅವರ ಮೂಲ ಹೆಸರು ಸಿಂಗನಲ್ಲೂರು ಪುಟ್ಟಸ್ವಾಮಯ್ಯ ಮುತ್ತುರಾಜ್. ಬಾಲ್ಯದಿಂದಲೇ ನಾಟಕ ರಂಗದಲ್ಲಿ ಅಸಕ್ತಿ ತೋರಿದ ಅವರು ರಂಗಭೂಮಿಯಿಂದ ಚಲನಚಿತ್ರ ಕ್ಷೇತ್ರಕ್ಕೆ ಪ್ರವೇಶಿಸಿದ್ದರು.

1954ರಲ್ಲಿ ಬಿಡುಗಡೆಯಾದ ಬೇಡರ ಕಣ್ಣಪ್ಪ ಚಿತ್ರದಿಂದ ನಟನೆಯ ಪ್ರಾರಂಭ. ಅದಾದ ಬಳಿಕ ಸುಮಾರು 202 ಚಿತ್ರಗಳಲ್ಲಿ ನಾಯಕ ನಟರಾಗಿ ಅಭಿನಯಿಸಿದರು. ಅವರ ಜನಮನ್ನಣೆ ಪಡೆದ ತುಂಬಾ ಜನಪ್ರಿಯ ಚಿತ್ರಗಳೆಂದರೆ: ಇಮ್ಮಡಿ ಪುಲಕೇಶಿ, ಶ್ರೀಕೃಷ್ಣದೇವರಾಯ, ವೀರಕೇಸರಿ, ರಣಧೀರ ಕಂಠೀರವ, ನಾಂದಿ, ಕಸ್ತೂರಿ ನಿವಾಸ, ಮಯೂರ, ಬಂಗಾರದ ಮನುಷ್ಯ, ಭಕ್ತಪ್ರಹ್ಲಾದ, ಜೀವನ ಚೈತ್ರ ಮುಂತಾದ ಅನೇಕ ಚಲನಚಿತ್ರಗಳಲ್ಲಿ ತಮ್ಮ ಅಭಿನಯದ ಮೂಲಕ ಪ್ರೇಕ್ಷಕರ ಹೃದಯ ಗೆದ್ದರು. ಐದು ದಶಕಗಳ ಕಾಲ 200ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿ ಕನ್ನಡ ಚಿತ್ರರಂಗಕ್ಕೆ ಅಪಾರವಾದ ಕೀರ್ತಿಯನ್ನು ತಂದುಕೊಟ್ಟರು.

ನಟನಷ್ಟೇ ಅಲ್ಲ. ಡಾ.ರಾಜ್‌ಕುಮಾರ್ ಉತ್ತಮ ಗಾಯಕರೂ ಆಗಿದ್ದರು. ಅವರ ಗಾಯನದಲ್ಲಿ ಅನೇಕ ರಾಗ ಸಂಯೋಜನೆಗಳ ಮೇಳವಿಯೊಂದಿಗೆ ಮಾಧುರ್ಯ ತುಂಬಿತ್ತು. ಕನ್ನಡದ ಕಲೆ ಸಂಗೀತ ಮತ್ತು ಭಾವನೆಗಳಿಂದ ಸದಾ ಅವರ ಮನ ಮಿಡಿಯುತ್ತಿತ್ತು. ಜೀವನ ಚೈತ್ರ ಚಿತ್ರದ 'ನಾದಮಯ ಈ ಲೋಕವೆಲ್ಲಾ' ಗೀತೆಗೆ ಭಾರತ ಸರ್ಕಾರದ ಆ ವರ್ಷದ ಶ್ರೇಷ್ಠ ಗಾಯಕರೆಂಬ ರಾಷ್ಟ್ರೀಯ ಗಾಯಕ ಪ್ರಶಸ್ತಿ ಆಯ್ಕೆಮಾಡಲಾಗಿತ್ತು.

ರಾಜ್‌ಕುಮಾರ್ ಅವರಿಗೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ, ಪದ್ಮಭೂಷಣ ಮತ್ತು ಕರ್ನಾಟಕ ರತ್ನ ಸೇರಿದಂತೆ ಅನೇಕ ಸನ್ಮಾನಗಳಿಂದ ಗೌರವಿಸಲಾಗಿತ್ತು. ಅವರ ಸಾಧನೆಗಳು ಕೇವಲ್ಲ ಚಿತ್ರರಂಗಕ್ಕೆ ಸೀಮಿತವಾಗಿರದೆ, ಕನ್ನಡಿಗರ ಆತ್ಮಗೌರವದ ಪ್ರತೀಕವಾಗಿ ನಡೆದ ಹೋರಾಟಗಳಲ್ಲಿ ಭಾಗವಹಿಸಿದ್ದರು. ಅನೇಕ ಕನ್ನಡ ಪರ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಜನರನ್ನು ಹುರಿದುಂಬಿಸಿ ಕರ್ನಾಟಕದಲ್ಲಿ ಕನ್ನಡಕ್ಕೆ ಪ್ರಥಮ ಆದ್ಯತೆ ಸಿಗುವಂತೆ ನೋಡಿಕೊಂಡರು.

2006ರ ಏಪ್ರಿಲ್ 12ರಂದು ಅವರು ಲೋಕ ತ್ಯಜಿಸಿದರೂ, ಅವರ ನೆನಪು ಕನ್ನಡಿಗರ ಮನ ಮನೆಗಳಲ್ಲಿ ಸದಾ ಜೀವಂತ. ಪುತ್ರರಾದ ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್ ಮತ್ತು ಪುನೀತ್‌ರಾಜ್‌ಕುಮಾರ್ ಅವರು ತಂದೆಯ ಕೀರ್ತಿಯ ಮಾರ್ಗದಲ್ಲೇ ನಟನೆ ಮತ್ತು ನಡತೆಯಲ್ಲೂ ಅನುಕರಿಸಿ ಮುಂದುವರಿದರು. ಡಾ.ರಾಜ್‌ಕುಮಾರ್ ಕೇವಲ ನಟರಲ್ಲ-ಅವರು ಕನ್ನಡದ ಹೃದಯಧ್ವನಿ, ಸಂಸ್ಕೃತಿಯ ಸಂಕೇತ. ಅವರ ಜೀವನವು ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಸೇವೆಗೆ ಸಮರ್ಪಿತವಾದ ಮತ್ತು ಕರ್ನಾಟಕದ ಒಂದು ಮಹಾನ್ ಚೇತನ.

ಈ ಬೆಂಗಳೂರು ಬೆರಗು ಪತ್ರಿಕೆ ವಿಭಾಗಕ್ಕೆ ಲೇಖನಗಳು, ವ್ಯಕ್ತಿಪರಿಚಯ, ಪುಸ್ತಕ ವಿಮರ್ಶೆ, ಸಿನೆಮಾ ವಿಮರ್ಶೆ, ನಾಟಕ ವಿಮರ್ಶೆ, ಕವನ, ಸಾಮಾಜಿಕ ಪ್ರತಿಕ್ರಿಯೆ, ಸಂಪಾದಕರಿಗೆ ಪತ್ರ, ದೂರು-ದುಮ್ಮಾನ ಮೊದಲಾದ ವಿಷಯ ವೈವಿಧ್ಯಗಳನ್ನು ಚಿಕ್ಕ ಮತ್ತು ಚೊಕ್ಕವಾಗಿ 1000 ಪದಗಳು ಮೀರದಂತೆ ಕಳುಹಿಸಲು ಈ ಕೆಳಗಿನ ಇ-ಮೇಲ್ ವಿಳಾಸವನ್ನು ಬಳಸಿ ಸಲ್ಲಿಸಬಹುದಾಗಿರುತ್ತದೆ.

**ಕಥೆ-ಕವನ ಕಳುಹಿಸುವ ಮುನ್ನ**

* ಸ್ಪರ್ಧೆಗೆ ಕಳುಹಿಸುವ ಕಥೆ, ಕವನಗಳು ಸ್ವತಂತ್ರ ರಚನೆ ಆಗಿರಬೇಕು. ಈ ಮೊದಲು ಯಾವುದೇ ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಸಾಮಾಜಿಕ ಜಾಲತಾಣ, ಅಂತರ್ಜಾಲ ಸೇರಿದಂತೆ ಎಲ್ಲಿಯೂ ಪ್ರಕಟ ಅಥವಾ ಪ್ರಸಾರ ಆಗಿರಬಾರದು.

* ಕಥೆಗೆ ಗರಿಷ್ಠ ಮಿತಿ-ಎರಡು ಸಾವಿರ ಪದಗಳು.

* ಕಥೆ-ಕವನಗಳು ಯೂನಿಕೋಡ್‌ನಲ್ಲಿ ಇರಬೇಕು.

* ಕಥೆ/ಕವನ ಇರುವ ಪುಟದಲ್ಲಿ ಹೆಸರು, ವಿವರ ಬರೆಯುವಂತಿಲ್ಲ. ಪ್ರತ್ಯೇಕ ಪುಟದಲ್ಲಿ ಹೆಸರು, ಅಂಚೆ ವಿಳಾಸ, ಫೋನ್ ನಂಬರ್, ಇ-ಮೇಲ್ ವಿಳಾಸ ಒದಗಿಸಬೇಕು. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ವರ್ಣಮಯ ಭಾವಚಿತ್ರದೊಂದಿಗೆ 80 ಪದ ಮೀರದಂತೆ ಕಿರು ಪರಿಚಯವನ್ನೂ ಜೊತೆಗೆ ಕಳುಹಿಸಬೇಕು.

* ಅಂಚೆ ಮೂಲಕ ಕಳುಹಿಸುವವರು ಪ್ರವೇಶಗಳ ಲಕೋಟೆಯ ಮೇಲೆ ಸ್ಪರ್ಧೆಯ ವಿಭಾಗವನ್ನು ಸ್ಪಷ್ಟವಾಗಿ ನಮೂದಿಸಬೇಕು.

* ಕಳುಹಿಸಿರುವ ರಚನೆಗಳನ್ನು ಹಿಂದಿರುಗಿಸುವುದಿಲ್ಲ.

* ಸಂಪಾದಕರ ತೀರ್ಮಾನವೇ ಅಂತಿಮ.

ಇ-ಮೇಲ್ ವಿಳಾಸ : ebbvijay@gmail.com

**ಇ-ಬೆಂಗಳೂರು ಬೆರಗು ವಿಳಾಸ:** ಇ-ಬೆಂಗಳೂರು ಬೆರಗು, ಕೇರಾಫ್ ಚನ್ನಮ್ಮ ಅಸೋಸಿಯೇಟ್ಸ್, ನಂ.1303, ನೆಲಮಹಡಿ, 4ನೇ ಕ್ರಾಸ್, ಅಶೋಕ್ ನಗರ, ಬಿಎಸ್‌ಕೆ 1ನೇ ಹಂತ, ಕತ್ರಿಗುಪ್ಪೆ/ವಿದ್ಯಾಪೀಠ ಮುಖ್ಯರಸ್ತೆ, ಬೆಂಗಳೂರು-560 050.

EBB Office # 1303, Ground Floor, 4th Cross, Ashok Nagar, BSK 1st Stage, Kathriguppe/Vidyapeeta Main Road, Bengaluru-560 050.

# 2000 ವರ್ಷಗಳ ಕರ್ನಾಟಕ ಇತಿಹಾಸ

**ಕ**ರ್ನಾಟಕದ ಇತಿಹಾಸದ ಆರಂಭ ಮತ್ತು ಈ ನೆಲದ ಪ್ರಥಮ ಸಾಮ್ರಾಜ್ಯರೆಂಬ ಕೀರ್ತಿಗೆ ಕೊಡಮಾಡಲು ಕನ್ನಡ ನುಡಿಯನ್ನು ಸ್ಥಳೀಯ ಭಾಷೆಯಾಗಿ ಆಡಳಿತಾಧಿಕಾರಿಗಳೊಂದಿಗೆ ಕನ್ನಡ ದೇಶವನ್ನು ಗುರುತಿಸಿ ಮಾನ್ಯತೆ ನೀಡಿದವರು ಶಾತವಾಹನರು. ಇಂದಿಗೂ ಶಾತವಾಹನರ ಮೊಟ್ಟ ಮೊದಲ ಕನ್ನಡ ದೊರೆಗಳೆಂಬ ಜಿಜ್ಞಾಸೆ ಮತ್ತು ಇತಿಹಾಸಕಾರರಿಂದ ಮನ್ನಣೆ, ಗುರುತಿಸುವಿಕೆಯು ಕಾಲಘಟ್ಟದ ಶಾಸನಗಳ ಅಲಭ್ಯತೆವೊಂದೆ ಕಾರಣವಲ್ಲದಿದ್ದರೂ ಆಡುಭಾಷೆಯ ಕನ್ನಡ ಪದ ಬಳಕೆಯ ಪುರಾವೆಯ ಮೀರಿ ಪ್ರಾರಂಭ ಕಾಲವೆಂಬುದು ಹೇಳಬಹುದಾಗಿತ್ತು ಮತ್ತು ಕನ್ನಡದ ಮೂಲ ಲಿಪಿ ಬ್ರಾಹ್ಮೀಯೊಂದಿಗೆ ಬೇರ್ಪಟ್ಟು ಹೊಸದಾಗಿ ಕವಲೊಡೆದು ಸ್ವತಂತ್ರ್ಯ ಕನ್ನಡ ಭಾಷೆಯ ಉಗಮದ ಕಾಲವಾಗಿತ್ತು ಎನ್ನಲು ಹಲವಾರು ಹಳಗನ್ನಡ ಪದಗಳ ಬಳಕೆ ಅವರ ಕಾಲದಲ್ಲಿತ್ತು.

ತದನಂತರ ಕದಂಬರು ಸ್ವತಂತ್ರ ಕನ್ನಡ ನಾಡಿನ ಗಡಿ ಗುರುತಿಸುವಿಕೆಯೊಂದಿಗೆ ಸಾಹಿತ್ಯ ಮತ್ತು ಶಾಸನಗಳ ಮೂಲಕ ಪ್ರಾರಂಭವಾಯಿತು. ಕದಂಬರ ಕಾಲವು ಕ್ರಿ.ಸ. 345 ರಿಂದ 540ರ ತನಕ, ಸುಮಾರು 200 ವರ್ಷಗಳು ಕರ್ನಾಟಕ ಸಾಮ್ರಾಜ್ಯವನ್ನು ಸ್ಥಾಪಿಸಿ, ವಿಸ್ತರಿಸಿ ಕನ್ನಡ ಭಾಷೆಯ ಅನುಷ್ಠಾನಗೊಳಿಸಿದ ಪ್ರಥಮರೆಂದು ಮತ್ತು ಕನ್ನಡ ಸ್ವಾಭಿಮಾನಕ್ಕೆ ಹೆಗ್ಗುರುತೆಂಬುದು ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಮುದ್ರೆ ಹಾಕಿದ್ದಾರೆ. ಇವರಲ್ಲಿ ಪ್ರಥಮ ದೊರೆ ಮಯೂರಶರ್ಮರಿಂದ ಪ್ರಾರಂಭವಾಗಿ ಭಗೀರಥವರ್ಮ, ಅವನ ಮಗ ರಘುವರ್ಮ ಇವನ ತಮ್ಮ ಕಾಕುಸ್ಥವರ್ಮ ಕಾಲವು ಕದಂಬರ ಸುವರ್ಣಯುಗವೆಂದು ಇತಿಹಾಸದಲ್ಲಿ ದಾಖಲಾಗಿದೆ. ಇವರ ಕಾಲದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳಾದ ಕೆರೆಗಳು, ದೇವಸ್ಥಾನಗಳು ಮತ್ತು ನಗರಗಳು ಕಟ್ಟಿಸಿದನೆಂಬ ಅನೇಕ ಶಾಸನಗಳು ದೊರೆತಿವೆ. ಕದಂಬರ ಕೊನೆಯ ದೊರೆ ಶಾಂತಿವರ್ಮನಲ್ಲಿ ಮಾಂಡಳಿಕನಾಗಿದ್ದ ಒಂದನೆ ಪುಲಕೇಶಿಯು ಕ್ರಿ.ಸ. 540ಕ್ಕೆ ಪ್ರವರ್ಧಮಾನಕ್ಕೆ ಬಂದು ಬನವಾಸಿಯನ್ನು ವಶಪಡಿಸಿಕೊಂಡ ನಂತರ ಚಾಳುಕ್ಯರ ರಾಜ್ಯಭಾರ ಪ್ರಾರಂಭವಾಗಿ ಎಂಟನೆ ಶತಮಾನದವರೆಗೆ ದಕ್ಷ ಮತ್ತು ಸಮೃದ್ಧಿ ಕರ್ನಾಟಕವನ್ನು ಪರಿಪಾಲಿಸಿದರು. ಇವರಲ್ಲಿ ಇಮ್ಮಡಿ ಪುಲಕೇಶಿ, ವಿಕ್ರಮಾದಿತ್ಯ ಮತ್ತು ಎರಡನೆ ವಿಕ್ರಮಾದಿತ್ಯನ ಕಾಲದ ಇತಿಹಾಸದ ಶಾಸನಗಳ ಅವರು ಕಟ್ಟಿಸಿದ ದೇವಸ್ಥಾನಗಳ ಮೂಲಕ ಇಂದಿಗೂ ನಮಗೆ ಗೋಚರಿಸುತ್ತಿದೆ.

ದಕ್ಷಿಣದ ಕರ್ನಾಟಕ ಮತ್ತು ಕಾವೇರಿ ನದಿತೀರದ ಪ್ರದೇಶವನ್ನು ಗಂಗರು ಕ್ರಿ.ಸ. 350 ರಿಂದ ಕ್ರಿ.ಶ.999 ರವರೆಗೆ ಆಳ್ವಿಕೆ ಮಾಡಿದ ಶಾಸನಗಳು ಲಭ್ಯವಿರುತ್ತದೆ. ಈ ನಡುವೆ ಬಾದಾಮಿಯ ಚಾಳುಕ್ಯರನ್ನು ಪದಚ್ಯುತಗೊಳಿಸಿ ಎಂಟನೆ ಶತಮಾನದ ಮಧ್ಯಭಾಗದಿಂದ ದಕ್ಷಿಣದ ವಿಶಾಲ ಸಾಮ್ರಾಜ್ಯದ ಆಡಳಿತವನ್ನು ತಮ್ಮ ವಶಕ್ಕೆ ಪಡೆದ ರಾಷ್ಟ್ರಕೂಟರು ಸುಮಾರು ಮುನ್ನೂರು ವರ್ಷಗಳ ಕಾಲ ರಾಜ್ಯಭಾರ ಮಾಡಿದ್ದರು. ಒಂದನೆ ಕರ್ಕನೆಂಬ ರಾಜನಿಂದ ಪ್ರಾರಂಭವಾಗಿ ಕ್ರಿ.ಸ. 973ರ ಎರಡನೆಯ ಕರ್ಕನವರೆಗೆ ಒಟ್ಟು 19 ರಾಜರ ಆಳ್ವಿಕೆಯಲ್ಲಿ ಭಾರತದ ಅದರಲ್ಲೂ ಕರ್ನಾಟಕದ ಹಿರಿಮೆ ಉತ್ತರಕ್ಕೆ ಮತ್ತು ಜಗತ್ತಿಗೆ ಸಾರಿದ ಪ್ರಥಮ ಕನ್ನಡ ರಾಜ್ಯ ಮನೆತನವಾಗಿದ್ದು, ಇವರ ಕಾಲದಲ್ಲೇ ಕಟ್ಟಿಸಿದ ಅಜಂತ ಎಲ್ಲೋರವೆಂಬ ಗುಹಾಂತರ ದೇವಾಲಯಗಳ ವಿಶ್ವಪ್ರಸಿದ್ಧಯಾಗಿವೆ. ಒಂದನೆ ಕೃಷ್ಣ, ಎರಡನೆ ಗೋವಿಂದ, ಧೃವ ಎರಡನೆಯ ಕೃಷ್ಣ, ಅಮೋಘವರ್ಷ ಮತ್ತು ಮೂರನೆ ಕೃಷ್ಣರೆಂಬ ಜಗದ್ ಖ್ಯಾತಿ ಗಳಿಸಿದ ಮಹಾರಾಜರಾಳಿದ ಸುವಿಶಾಲ ಸಾಮ್ರಾಜ್ಯವು ಈ ನೆಲದ ಹಿರಿಮೆ ಸಾರಿದ್ದು ಮತ್ತು ಕವಿರಾಜ ಮಾರ್ಗ ಶಿಲಾಶಾಸನ ಕನ್ನಡದ ಮೇರುಕೃತಿಯಾಗಿ ಇತಿಹಾಸದ ಮೈಲುಗಲ್ಲಾಗಿ ಗುರುತಿಸಲ್ಪಟ್ಟಿದ್ದು ಇವರ ಕಾಲದಲ್ಲೆ. ರಾಷ್ಟ್ರಕೂಟರು ಮತ್ತು ಕಲ್ಯಾಣ ಚಾಲುಕ್ಯರ ಆಡಳಿತವಾದ ನಂತರ ಪತನದ ಅಂಚಿನಲ್ಲಿದ್ದ ಕನ್ನಡ ನಾಡಿನ ರಾಜ್ಯವನ್ನು ಗುರು ವಿದ್ಯಾರಣ್ಯರಿಂದ ದೀಕ್ಷೆ ಪಡೆದ ಹಕ್ಕಬುಕ್ಕರು ದೆಹಲಿ ಸುಲ್ತಾನರ ಮತ್ತು ಉತ್ತರದ ಆಕ್ರಮಣಕಾರರು, ದೇಶ ವಿದೇಶಿ ದಾಳಿಕೋರರಿಂದ ರಕ್ಷಿಸಲು ವಿಜಯನಗರ ರಾಜವಂಶವು ಹಂಪಿಯೆಂಬ ಏಳುಸುತ್ತಿನ ಕೋಟೆಯಿಂದ ಬೆಟ್ಟಗುಡ್ಡಗಳ ನಡುವೆ ಉದಯವಾಗಿ ಈ ಭಾಗದ ಪರಂಪರಾಗತ ಧರ್ಮ, ಜೀವನ ವಿಧಾನಗಳನ್ನು ರಕ್ಷಿಸಿ ಅವುಗಳ ಪ್ರಗತಿಗೆ ತನ್ನದೆ ಕೊಡುಗೆ ನೀಡಿತಲ್ಲದೆ, ಇಡೀ ಜಗತ್ತಿನಲ್ಲಿ ಅತ್ಯಂತ ಶ್ರೀಮಂತ ರಾಜ್ಯವೆಂಬ ಖ್ಯಾತಿ ಪಡೆದು ಭಾರತದ ಸುವರ್ಣ ಯುಗವೆಂಬ ಹೆಗ್ಗಳಿಕೆಗೆ ದೇಶ ವಿದೇಶಿಯರಿಂದ ಮನ್ನಣೆ ಪಡೆದು ಇತಿಹಾಸ ಪುಟಗಳಲ್ಲಿ ಮತ್ತು ತನ್ನ ದೇವಸ್ಥಾನ ಶಿಲ್ಪ ಕಲೆ ಶಾಸನಗಳಲ್ಲಿ ದಾಖಲಾಗಿ ಇಂದಿಗೂ ಜನಸಾಮಾನ್ಯರ ಮಾನಸದಲ್ಲಿ ಅಚ್ಚಳಿಯದೆ ಉಳಿದಿದೆ.

ಕೃಷ್ಣನದಿ ದಡದ ತಾಳಿಕೋಟೆ ಬಳಿ ಬಹುಮನಿ ರಾಜರೊಂದಿಗೆ ನಡೆದ ಭೀಕರ ಯುದ್ಧದಲ್ಲಿ ಅಳಿಯ ರಾಮರಾಯರ ಸೋಲು ಮತ್ತು ಸಾವಿನೊಂದಿಗೆ ಸೋತ ವಿಜಯನಗರ ಸಾಮ್ರಾಜ್ಯದ ಹಂಪಿ ಪತನವು ಮುಂದೆ ಪೆನುಗೊಂಡದ ಅರಮನೆಗೆ ಸ್ಥಳಾಂತರಗೊಂಡು ಅಳಿವಿನಂಚಿಗೆ ಬಂದು ತಲುಪಿತು. ಮುಂದೆ ಕನ್ನಡ ದೊರೆಗಳಿಲ್ಲದೆ ಇಪ್ಪತ್ತು ಸಂಸ್ಥಾನಗಳಾಗಿ ಛಿದ್ರಗೊಂಡ ಕರ್ನಾಟಕ ಭೂಭಾಗವು ತನ್ನ ಕನ್ನಡತನವನ್ನು 1802ರ ಮೈಸೂರಿನ ಒಡೆಯರ ಸಂಸ್ಥಾನ ಉದಯವಾಗುವವರೆಗೂ ಸಣ್ಣಪುಟ್ಟ ಪಾಳೆಗಾರರು ಮತ್ತು ಜಮೀನ್ದಾರರ ಆಡಳಿತ ದಲ್ಲಿದ್ದು ಕನ್ನಡದ ಅಸ್ತಿತ್ವ ಕಳೆದುಕೊಂಡಿತು. ಬ್ರಿಟೀಷ್ ಆಡಳಿತದಲ್ಲಿ ಕರ್ನಾಟಕ ಮತ್ತು ಕನ್ನಡ ಪ್ರದೇಶಗಳ ಕನ್ನಡಿಗರು ಏಕೀಕರಣಕ್ಕೆ ತಪಿಸುತ್ತಾ ಸ್ವಾತಂತ್ರ್ಯ ಸಂಗ್ರಾಮದಲ್ಲಿ, ಹೆಜ್ಜೆ ಇಟ್ಟು 1947 ಮತ್ತು 1956ರ ಕರ್ನಾಟಕದ ಏಕೀಕರಣವರೆಗೂ ವಿಶಾಲ ಕರ್ನಾಟಕವಾಗಿ ಒಂದುಗೂಡಿದ ನಂತರ ಕನ್ನಡ ನಾಡನುಡಿಯ ಪುನರುದ್ಧೀರಣ ವಾಯಿತು.



ಗತವೈಭವದ ಭವ್ಯ ಇತಿಹಾಸವುಳ್ಳ ಕನ್ನಡ ನಾಡಿನ ಈ ಇತಿಹಾಸ ಇಲ್ಲಿನ ಜನರ ದೃಢ ಸಂಕಲ್ಪ ಕೆಚ್ಚದೆಯ ಆತ್ಮವಿಶ್ವಾಸ ಮತ್ತು ಭಾಷೆಯ ಬದ್ಧತೆಯ ಅಭಿಮಾನದಿಂದಾಗಿ 2000 ವರ್ಷಗಳಿಂದ ಅಳಿಯದೆ ಉಳಿದು ಇಂದಿಗೂ ಜಗತ್ ಪ್ರಸಿದ್ಧಿಯಾಗಿ ಕನ್ನಡ ನಾಡನುಡಿಯು ಪ್ರವರ್ಧಮಾನವಾಗಿ ಬೆಳೆಯುತ್ತಿದೆ.

# ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು

ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು
ಬದುಕು ಬಲುಹಿನ ನಿಧಿಯು ಸದಭಿಮಾನದ ಗೂಡು

ರಾಜನ್ಯರಿಪು ಪರಶುರಾಮನಮ್ಮನ ನಾಡು
ಆ ಜಲಧಿಯನೆ ಜಿಗಿದ ಹನುಮನುದಿಸಿದ ನಾಡು
ಓಜೆಯಿಂ ಮೆರೆದರಸುಗಳ ಸಾಹಸದ ಸೂಡು
ತೇಜವನು ನಮಗೀವ ವೀರವೃಂದದ ಬೀಡು

ಲೆಕ್ಕಿಗಮಿತಾಕ್ಷರರು ಬೆಳೆದು ಮೆರೆದಿಹ ನಾಡು
ಜಕ್ಕಣನ ಶಿಲ್ಪಕಲೆಯಚ್ಚರಿಯ ಕರುಗೋಡು



ಚೊಕ್ಕಮತಗಳ ಸಾರಿದವರಿಗಿದು ನೆಲೆವೀಡು
ಬೊಕ್ಕಸದ ಕಣಜವೈ ವಿದ್ವತ್ತೆಗಳ ಕಾಡು

ಪಾವನೆಯರಾ ಕೃಷ್ಣ ಭೀಮೆಯರ ತಾಯ್ಯಾಡು
ಕಾವೇರಿ ಗೋದೆಯರು ಮೈದೊಳೆವ ನಲುನಾಡು
ಆವಗಂ ಸ್ಫೂರ್ತಿಸುವ ಕಬ್ಬಿಗರ ನಡೆಮಾಡು
ಕಾವ ಗದುಗಿನ ವೀರನಾರಾಯಣನ ಬೀಡು

–ಹುಯಿಲಗೋಳ ನಾರಾಯಣರಾಯರು

# ಬೆಂಗಳೂರು ತ್ಯಾಜ್ಯ ನೀರಿಗೆ ಜೀವ ತುಂಬುವ 'ವೃಷಭಾವತಿ' ಕಣಿವೆ ಯೋಜನೆ: ಮೊದಲ ಹಂತ ಶೇ.50ರಷ್ಟು ಪೂರ್ಣ



**ಬೆ**ಂಗಳೂರಿನ ತ್ಯಾಜ್ಯ ನೀರು ಬಳಸಿಕೊಂಡು ಬೆಂಗಳೂರು ನಗರ ಗ್ರಾಮಾಂತರ, ಚಿಕ್ಕಬಳ್ಳಾಪುರ ಮತ್ತು ತುಮಕೂರು ಜಿಲ್ಲೆಗಳಲ್ಲಿನ ಒಟ್ಟು 244 ಕೆರೆಗಳನ್ನು ಶುದ್ಧೀಕರಿಸಿದ ನೀರನಿಂದ ತುಂಬುವ ಕಾಮಗಾರಿಯ ಮೊದಲ ಹಂತದ ಯೋಜನಾ ಮೊತ್ತ ರೂ.1,081 ಕೋಟಿಗಳಷ್ಟಿದ್ದು ಮೂರು ಹಂತಗಳಿಂದ 244 ಕೆರೆಗಳಿಗೆ ನೀರು ಹರಿಸುವ ಗುರಿ ಹೊಂದಿದ್ದು, 2026ರ ಜುಲೈಗೆ ಮೊದಲ ಹಂತ ಪೂರ್ಣಗೊಳ್ಳುವ ಗಡುವು ಸರ್ಕಾರವು ನೀಡಿರುತ್ತದೆ.

ಜಲಸಂರಕ್ಷಣೆ ಮತ್ತು ಅಂತರ್ಜಲ ಅಭಿವೃದ್ಧಿಗೆ ಬೃಹತ್ ಹೆಜ್ಜೆ ಇಟ್ಟಿರುವ ಸಣ್ಣ ನೀರಾವರಿ ಇಲಾಖೆಯ ಮಹತ್ವದ 'ವೃಷಭಾವತಿ ಕಣಿವೆ ಯೋಜನೆ'ಯು ನಿರೀಕ್ಷಿತ ವೇಗದಲ್ಲಿ ಪ್ರಗತಿ ಕಾಣುತ್ತಿದೆ. ಮೂರು ಹಂತಗಳ ಪೈಕಿ ಮೊದಲ ಹಂತವು ಈತನಕ ಶೇ.50ರಷ್ಟಕ್ಕೂ ಹೆಚ್ಚಿನ ಪ್ರಗತಿ ಕಂಡಿದೆ.

ಬೆಂಗಳೂರು ಜಲಮಂಡಳಿ (BWSSB) ವತಿಯಿಂದ ದ್ವಿತೀಯ ಹಂತದಲ್ಲಿ ಸಂಸ್ಕರಿಸಿದ 308 ದಶಲಕ್ಷ ಲೀ. ನೀರನ್ನು ಅಂದರೆ ಸುಮಾರು 4 ಟಿಎಂಸಿ ನೀರು ಬಳಸಿಕೊಂಡು ಈ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಯೋಜನೆಯು ಒಟ್ಟು 3 ಹಂತಗಳಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಮತ್ತು ತುಮಕೂರು ಜಿಲ್ಲೆಗಳಲ್ಲಿನ ಒಟ್ಟು 244 ಕೆರೆಗಳಿಗೆ ನೀರನ್ನು ಹರಿಸಲು ಉದ್ದೇಶಿಸಿದೆ. ಈ ಯೋಜನೆಯು ಮುಖ್ಯ ಉದ್ದೇಶ ಅಂತರ್ಜಲ ಮಟ್ಟವನ್ನು ಅಭಿವೃದ್ಧಿಪಡಿಸುವುದಾಗಿದೆ.

ಯೋಜನೆಯ ಮೊದಲನೇ ಹಂತವು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ತುಮಕೂರು ಜಿಲ್ಲೆಗಳಲ್ಲಿನ 70 ಕೆರೆಗಳಿಗೆ 2 ಲಿಫ್ಟ್‌ಗಳ ಮೂಲಕ ನೀರನ್ನು ಹರಿಸುವ ಕಾಮಗಾರಿಯನ್ನು ಒಳಗೊಂಡಿದೆ. ಮೊದಲ ಹಂತದ ಯೋಜನೆಯ ಅಂದಾಜು ಮೊತ್ತ ರೂ.1,081.00 ಕೋಟಿ. ಈ ಕಾಮಗಾರಿಯ ಗುತ್ತಿಗೆಯನ್ನು ಶಂಕರನಾರಾಯಣ ಕನ್ಸ್ಟ್ರಕ್ಷನ್ ಸಂಸ್ಥೆಗೆ ನೀಡಲಾಗಿದೆ. ಮೊದಲ ಹಂತದ ಯೋಜನೆಯ ಅಂದಾಜು ಮೊತ್ತ ರೂ. 1,081.00 ಕೋಟಿ. ಈ ಕಾಮಗಾರಿಯ ಗುತ್ತಿಗೆಯನ್ನು ಶಂಕರನಾರಾಯಣ ಕನ್ಸ್ಟ್ರಕ್ಷನ್ ಸಂಸ್ಥೆಗೆ ನೀಡಲಾಗಿದೆ. ಒಪ್ಪಂದದ ಪ್ರಕಾರ ಯೋಜನೆಯ ಅವಧಿ 36 ತಿಂಗಳುಗಳು ಮತ್ತು 5 ವರ್ಷಗಳ ನಿರ್ವಹಣೆಯನ್ನು ಒಳಗೊಂಡಿದೆ. ಟೆಂಡರ್ ಕರಾರಿನಂತೆ ಮೊದಲನೇ ಹಂತದ ಯೋಜನೆಯನ್ನು ಜುಲೈ-2026 ರಲ್ಲಿ ಪೂರ್ಣಗೊಳಿಸಬೇಕಾಗಿದೆ. ಯೋಜನೆಯು ಜುಲೈ 2023ರಲ್ಲಿ ಪ್ರಾರಂಭವಾಗಿದ್ದು, ಈತನಕ ಶೇ.50 ಕ್ಕಿಂತ ಹೆಚ್ಚು ಪ್ರಗತಿ ಸಾಧಿಸಿದೆ. ಒಟ್ಟಾರೆ 103.20 ಕಿ.ಮೀ ಪೈಪ್ ಲೈನ್ ಉದ್ದದಲ್ಲಿ, 81.3 ಕಿ.ಮೀ ಉದ್ದದ ಪೈಪ್‌ಗಳನ್ನು ಪೂರೈಕೆ ಮಾಡಲಾಗಿದ್ದು, 39.50 ಕಿ.ಮೀ ಉದ್ದದ ಪೈಪ್‌ಲೈನ್ ಅಳವಡಿಕೆ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ.

ನಾಯಂಡಹಳ್ಳಿ ಎಸ್‌ಟಿಪಿ ಪಂಪ್‌ಹೌಸ್‌ನ ಕಾಮಗಾರಿ ಪ್ರಗತಿಯಲ್ಲಿದೆ. ಹುರುಳೀಹಳ್ಳಿ ಕೆರೆಯ ಬಳಿ ಪಂಪ್‌ಹೌಸ್ ನಿರ್ಮಾಣಕ್ಕೆ ಭೂಸ್ವಾಧೀನ ಸಮಸ್ಯೆ ಬಗೆಹರಿದಿದೆ. ಅನ್ಯ ಇಲಾಖೆಗಳಿಂದ ಅನುಮತಿ ವಿಳಂಬದಿಂದಾಗಿ ಕಾಮಗಾರಿಗೆ ತೊಡಕಾಗಿದ್ದು, ಪ್ರಸ್ತುತ 89.50 ಕಿ.ಮೀ ಉದ್ದಕ್ಕೆ ಅನುಮತಿ ಪಡೆದು ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ. ಅಧಿಕಾರಿಯೊಬ್ಬರ ಹೇಳಿಕೆಯಂತೆ, ಡೆಡ್‌ಲೈನ್‌ಗಿಂತ ನಾಲ್ಕೈದು ತಿಂಗಳು ಮೊದಲ ಹಂತ ತಡವಾಗುವ ಸಾಧ್ಯತೆಯಿದೆ. ಈ ಯೋಜನೆಯಿಂದ ಸುಮಾರು 15 ಎಂಎಲ್‌ಡಿ ನೀರನ್ನು ನೆಲಮಂಗಲ ತಾಲ್ಲೂಕಿನ ಸೋಂಪುರ ಮತ್ತು ದಾಬಾಸ್‌ಪೇಟೆ ಕೈಗಾರಿಕಾ ಪ್ರದೇಶಕ್ಕೆ ಒದಗಿಸಲಾಗುತ್ತಿದ್ದು ಕೈಗಾರಿಕೆಗಳ ನೀರಿನ ಬೇಡಿಕೆಯನ್ನು ಪೂರೈಸಲು ಸಹಾಯವಾಗಲಿದೆ.

**ಯೋಜನೆಯ ಪ್ರಮುಖ ಅನುಕೂಲಗಳೇನು?:** ವ್ಯರ್ಥವಾಗುತ್ತಿದ್ದ ಸಂಸ್ಕರಿತ ನೀರನ್ನು ಬರಪೀಡಿತ ಜಿಲ್ಲೆಗಳ ಅಂತರ್ಜಲ ಅಭಿವೃದ್ಧಿಗೆ ಬಳಸಲಾಗುತ್ತಿದೆ. ಅತೀಯಾದ ಅಂತರ್ಜಲ ಬಳಕೆಯಿಂದ ಬರಿದಾಗಿದ್ದ ಭೂಮಿಯಲ್ಲಿ ಅಂತರ್ಜಲ ಮಟ್ಟವು ಮರುಪೂರಣಗೊಳ್ಳಲಿದೆ. ಕೊಳವೆಬಾವಿ ಅವಲಂಬಿತ ಕೃಷಿ ಕ್ಷೇತ್ರ ವೃದ್ಧಿಸಲಿದೆ. ಆಳದಿಂದ ನೀರನ್ನು ಎತ್ತಲು ಬಳಕೆಯಾಗುತ್ತಿದ್ದ ಇಂಧನ (ವಿದ್ಯುತ್) ಉಳಿತಾಯವಾಗಲಿದೆ. ವಾರ್ಷಿಕ ಸುಮಾರು 4.00 TMC ನೀರನ್ನು ಹೊರಸಾಗಿಸುವುದರಿಂದ ಬೆಂಗಳೂರು ನಗರದ ಮಳೆ ನೀರಿನ ಕಾಲುವೆಗಳ ಮೇಲಿನ ಒತ್ತಡ ಕಡಿಮೆಯಾಗಿ ನಗರದ ಪ್ರವಾಹ ನಿಯಂತ್ರಣದಲ್ಲಿ ಸಹಕಾರಿಯಾಗಲಿದೆ. ದೇಶದಲ್ಲಿ ಶುದ್ಧೀಕರಿಸಿದ ನೀರಿನ ಮರುಬಳಕೆ ಮಾಡಿಕೊಳ್ಳುವ ರಾಜ್ಯಗಳ ಪೈಕಿ ಕರ್ನಾಟಕವು ಅಗ್ರಮಾನ್ಯ ರಾಜ್ಯವಾಗಿ ಹೊರಹೊಮ್ಮಲು ಈ ಯೋಜನೆ ಸಹಕಾರಿಯಾಗಲಿದೆ.

**ನೀರಿನ ಗುಣಮಟ್ಟದ ಮೇಲ್ವಿಚಾರಣೆ:** ಯೋಜನೆಯ ಯಶಸ್ಸಿಗೆ ನೀರಿನ ಗುಣಮಟ್ಟ ಬಹಳ ಮುಖ್ಯವಾಗಿದೆ. ಈ ಸಂಬಂಧ, ಬೆಂಗಳೂರು ಜಲಮಂಡಳಿ (BWSSB) ಯಿಂದ ಸಂಸ್ಕರಣಾ ಘಟಕದಲ್ಲಿನ ನೀರಿನ ಗುಣಮಟ್ಟ ಪರೀಕ್ಷೆಗೆ ಕ್ರಮ ಕೈಗೊಂಡಿದ್ದು, ಸಣ್ಣ ನೀರಾವರಿ ಇಲಾಖೆಯಿಂದಲೂ ಪ್ರತ್ಯೇಕ ಸಂಸ್ಥೆಗೆ ಗುತ್ತಿಗೆ ನೀಡಿ ಪರೀಕ್ಷೆಗಳನ್ನು ನಡೆಸಲು ಕ್ರಮವಹಿಸಲಾಗುತ್ತಿದೆ. ಇದರ ಜೊತೆಗೆ, ಯೋಜನೆಯ ಪ್ರಾರಂಭದ ಮುನ್ನ ಮತ್ತು ಅನುಷ್ಠಾನದ ನಂತರದ ಪರಿಣಾಮದ ಕುರಿತು ಅಧ್ಯಯನ ಕೈಗೊಳ್ಳಲು ಭಾರತೀಯ ವಿಜ್ಞಾನ ಸಂಸ್ಥೆಗೆ (IISc) ಆ ನೀಡಲಾಗಿದೆ.

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯು ಈ ಯೋಜನೆಯ ಮೂಲಕ 'ಓಡುವ ನೀರನ್ನು ನಿಲ್ಲಿಸಿ, ನಿಂತ ನೀರನ್ನು ಇಂಗಿಸಿ' ಎಂಬ ಧ್ಯೆಯದೊಂದಿಗೆ ಅಂತರ್ಜಲವನ್ನು ಮರುಪೂರಣಗೊಳಿಸಿ, ಗ್ರಾಮೀಣ ಭಾಗ ಮತ್ತು ಕೃಷಿ ಕ್ಷೇತ್ರಕ್ಕೆ ಪೂರಕ ವಾತಾವರಣ ನಿರ್ಮಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಜಲಸಂರಕ್ಷಣೆ ಮತ್ತು ಅಂತರ್ಜಲ ಅಭಿವೃದ್ಧಿಗೆ ಬೃಹತ್ ಹೆಜ್ಜೆ ಇಟ್ಟಿರುವ ಸಣ್ಣ ನೀರಾವರಿ ಇಲಾಖೆಯ ಮಹತ್ವದ 'ವೃಷಭಾವತಿ ಕಣಿವೆ ಯೋಜನೆ'ಯು ನಿರೀಕ್ಷಿತ ವೇಗದಲ್ಲಿ ಪ್ರಗತಿ ಕಾಣುತ್ತಿದೆ. ಮೂರು ಹಂತಗಳ ಪೈಕಿ ಮೊದಲ ಹಂತವು ಈತನಕ ಶೇ.50ರಷ್ಟಕ್ಕೂ ಹೆಚ್ಚಿನ ಪ್ರಗತಿ ಕಂಡಿದೆ.

ಬೆಂಗಳೂರು ಜಲಮಂಡಳಿ (BWSSB) ವತಿಯಿಂದ ದ್ವಿತೀಯ ಹಂತದಲ್ಲಿ ಸಂಸ್ಕರಿಸಿದ 308 ದಶಲಕ್ಷ ಲೀ. ನೀರನ್ನು ಅಂದರೆ ಸುಮಾರು 4 ಟಿಎಂಸಿ ನೀರು ಬಳಸಿಕೊಂಡು ಈ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಯೋಜನೆಯು ಒಟ್ಟು 3 ಹಂತಗಳಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಮತ್ತು ತುಮಕೂರು ಜಿಲ್ಲೆಗಳಲ್ಲಿನ ಒಟ್ಟು 244 ಕೆರೆಗಳಿಗೆ ನೀರನ್ನು ಹರಿಸಲು ಉದ್ದೇಶಿಸಿದೆ. ಈ ಯೋಜನೆಯ ಮುಖ್ಯ ಉದ್ದೇಶ ಅಂತರ್ಜಲ ಮಟ್ಟವನ್ನು ಅಭಿವೃದ್ಧಿಪಡಿಸುವುದಾಗಿದೆ.

# ಪಶ್ಚಿಮ ಬಂಗಾಳದತ್ತ ಮೋದಿ ಚಿತ್ತ



ನವದೆಹಲಿ: ಬಿಹಾರದಲ್ಲಿ ಮಹಾಘಟಬಂಧನ್ ಮೈತ್ರಿಕೂಟ ವನ್ನು ಮತ್ತೊಮ್ಮೆ ಅಧಿಕಾರದಿಂದ ದೂರ ಇಟ್ಟು ಎನ್‌ಡಿಎ ಬಾರಿ ಬಹುಮತದೊಂದಿಗೆ ಅಧಿಕಾರ ಹಿಡಿದಿದೆ. ಇನ್ನು ಪಶ್ಚಿಮ ಬಂಗಾಳದಲ್ಲಿ ಅಧಿಕಾರ ಹಿಡಿಯುವ ಗುರಿಯನ್ನು ಪ್ರಧಾನಿ ನರೇಂದ್ರ ಮೋದಿ ನಿಗಧಿಪಡಿಸಿದ್ದಾರೆ.

ಬಿಹಾರದಲ್ಲಿ ಎನ್‌ಡಿಎ ಅಧಿಕಾರ ಹಿಡಿಯಲು ಪ್ರಧಾನಿ ನರೇಂದ್ರ ಮೋದಿ ಅವರ ಜನಪ್ರಿಯತೆ ಮತ್ತು ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ನಿರಂತರ ಆಕರ್ಷಣೆ ಕಾರಣ ಎಂದು ಹೇಳಲಾಗಿದ್ದು ಮುಂದಿನ ವರ್ಷದ ಆರಂಭದಲ್ಲಿ ನಡೆಯಲಿರುವ ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ಅಧಿಕಾರ ಹಿಡಿಯುವ ನಿಟ್ಟಿನಲ್ಲಿ ಬಿಜೆಪಿ ಕಾರ್ಯತಂತ್ರ ರೂಪಿಸಿದೆ.

ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದ ಗೆಲುವಿನ ಪ್ರಮಾಣ ವನ್ನು ಅದರ ಎರಡು ಪ್ರಮುಖ ಪಾಲುದಾರರಾದ ಬಿಜೆಪಿ ಮತ್ತು ಜೆಡಿ (ಯು) ತಲಾ 101 ಸ್ಥಾನಗಳಲ್ಲಿ ಸ್ಪರ್ಧಿಸಿ ಶೇಕಡಾ 85 ಕ್ಕಿಂತ ಹೆಚ್ಚಿನ ಯಶಸ್ಸಿನ ದರ ಹೊಂದಿವೆ. ಮೈತ್ರಿಕೂಟ ನಾಲ್ಕನೇ ಮೂರು ಭಾಗದಷ್ಟು ಬಹುಮತಕ್ಕಾಗಿ 200 ಸ್ಥಾನ ದಾಟಿದೆ. ಈ ಕುರಿತು ಪ್ರತಿಕ್ರಿಯಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು ಎನ್ ಡಿಎ ಬೃಹತ್ ಗೆಲುವು ಬಿಹಾರದ ಜನರು ರಾಜ್ಯವನ್ನು ಬಿರುಗಾಳಿಯಿಂದ ವಶಪಡಿಸಿಕೊಂಡಿದ್ದಾರೆ ಎಂದು ಹೇಳಿದ್ದಾರೆ.

ಎನ್‌ಡಿಎಯ ದೃಢವಾದ ಗೆಲುವನ್ನು ಶ್ಲಾಘಿಸಿದ ಪ್ರಧಾನಿ ಮೋದಿ, ಮತದಾರರು "ಜಂಗಲ್ ರಾಜ್ ಜನರ ಕೋಮುವಾದಿ ಸೂತ್ರ"ವನ್ನು ತಿರಸ್ಕರಿಸುವುದರೊಂದಿಗೆ ಹೊಸ ಮಹಿಳಾ ಮತ್ತು ಯುವಕರು" ಸೂತ್ರವನ್ನು ಪರಿಚಯಿಸಿದ್ದಾರೆ ಎಂದು ಹೇಳಿದರು.

243 ಕ್ಷೇತ್ರಗಳ ಪೈಕಿ ಬಿಜೆಪಿ 87 ಸ್ಥಾನಗಳನ್ನು ಗೆದ್ದಿದೆ, 2020ರಲ್ಲಿ 74 ಸ್ಥಾನಗಳಿಂದ ಏರಿದೆ, ಆದರೆ ನಿತೀಶ್‌ಕುಮಾರ್ ಅವರ ಜನತಾದಳ ಯು 78 ಸ್ಥಾನಗಳನ್ನು ಗಳಿಸಿದೆ, 243 ಸದಸ್ಯರ ವಿಧಾನಸಭೆಯಲ್ಲಿ ಬಹುಮತದ ಸಂಖ್ಯೆ 122.

ರಾಷ್ಟ್ರೀಯ ಜನತಾ ದಳದ ಸಂಖ್ಯೆ 75 ರಿಂದ 24ಕ್ಕೆ ಇಳಿದಿದೆ, ಮತ್ತು ಕಾಂಗ್ರೆಸ್ ಸ್ಪರ್ಧಿಸಿದ್ದ 61 ಸ್ಥಾನಗಳಲ್ಲಿ ಕೇವಲ ಆರು ಸ್ಥಾನಗಳನ್ನು ಮಾತ್ರ ಗಳಿಸುವಲ್ಲಿ ಯಶಸ್ವಿಯಾಯಿತು, ಕಳೆದ ಬಾರಿ 19 ಸ್ಥಾನ ಪಡೆದಿತ್ತು. ಈ ಬಾರಿ 13 ಸ್ಥಾನಕ್ಕೆ ಕಳೆದುಕೊಂಡಿದೆ

ಮುಖ್ಯಮಂತ್ರಿ ನಿತೀಶ್ ಕುಮಾರ್ ಪ್ರತಿಕ್ರಿಯಿಸಿ "ಚುನಾವಣೆಯಲ್ಲಿ ನಮಗೆ ಅಭೂತಪೂರ್ವ ಬಹುಮತ ನೀಡುವ ಮೂಲಕ ರಾಜ್ಯದ ಜನರು ಸರ್ಕಾರದ ಮೇಲೆ ತಮ್ಮ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಇದಕ್ಕಾಗಿ, ರಾಜ್ಯದ ಎಲ್ಲಾ ಮತದಾರರಿಗೆ ನಮಸ್ಕರಿಸುತ್ತೇನೆ ಮತ್ತು ನನ್ನ ಹೃತ್ಪೂರ್ವಕ ಕೃತಜ್ಞತೆ ಮತ್ತು ಧನ್ಯವಾದಗಳನ್ನು ಅರ್ಪಿಸುತ್ತೇನೆ" ಎಂದಿದ್ದಾರೆ.

# ಬಿಹಾರ ಚುನಾವಣೆ ಮೈತ್ರಿ ರಾಜಕಾರಣ ಮತದಾರರ ಒಲವು ಯಾರತ್ತ? ಫಲಿತಾಂಶಕ್ಕೆ ಮುನ್ನ




**ಜ**ನಸಂಖ್ಯೆಯ ದೃಷ್ಟಿಯಿಂದ ಮತ್ತು ರಾಜಕೀಯ ಪ್ರಾಬಲ್ಯದ ದೃಷ್ಟಿಯಿಂದ ಮಹತ್ವ ಪಡೆದಿರುವ ಬಿಹಾರದಲ್ಲಿ 2025ರ ವಿಧಾನಸಭಾ ಚುನಾವಣೆ ಪ್ರಕ್ರಿಯೆ ಆರಂಭವಾಗಿದೆ. ಅಧಿಕಾರ ಹಿಡಿಯಲು ಎನ್‌ಡಿಎ ಮತ್ತು 'ಇಂಡಿಯಾ' ಕೂಟಗಳು ತೀವ್ರ ಪೈಪೋಟಿ ನಡೆಸುತ್ತಿವೆ. ಎನ್‌ಡಿಎ ಕೂಟದಲ್ಲಿ ಬಿಜೆಪಿ ಮತ್ತು ಜೆಡಿಯು ತಲಾ 101 ಸಮಾನ ಸಂಖ್ಯೆಯ ಕ್ಷೇತ್ರಗಳಲ್ಲಿ ಕಣಕ್ಕಿಳಿದಿವೆ. ಹಾಲಿ ಮುಖ್ಯಮಂತ್ರಿ ನಿತೀಶ್‌ಕುಮಾರ್ ಆಡಳಿತ ವಿರೋಧಿ ಅಲೆ ಎದುರಿಸುತ್ತಿದ್ದು, ತನ್ನ ಪ್ರಚಾರ ಕಾರ್ಯ ಪ್ರಾರಂಭಿಸಿದ್ದರು ಇಂದಿನ ಉತ್ಸಾಹ ಕಾಣುತ್ತಿಲ್ಲ.

ರಾಜಕೀಯ ಪಕ್ಷಗಳು ಜಾತಿ ಸಮೀಕರಣದ ಲೆಕ್ಕಾಚಾರದ ಆಧಾರದಲ್ಲೇ ಟಿಕೆಟ್ ಹಂಚಿಕೆ ಮಾಡಿವೆ. 1931ರ ನಂತರ ನಮ್ಮ ದೇಶದಲ್ಲಿ ಮೊದಲ ಬಾರಿ ಜಾತಿ ಸಮೀಕ್ಷೆ ನಡೆಸಿರುವ ರಾಜ್ಯ ಬಿಹಾರ, ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಸೇರಿದವರಲ್ಲಿ ಇಬಿಸಿಗಳು ಶೇ 36ರಷ್ಟಿದ್ದರೆ, ಒಬಿಸಿಗಳು ಶೇ 27ರಷ್ಟು ಇದ್ದಾರೆ. ಹಾಗಾಗಿ, ಎಲ್ಲಾ ಪಕ್ಷಗಳು ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಇಬಿಸಿ ಮತ್ತು ಓಬಿಸಿ ವರ್ಗಗಳಿಗೆ ಸೇರಿದ ಸಮುದಾಯಗಳ ಮುಖಂಡರನ್ನು ಅತಿ ಹೆಚ್ಚು ಕ್ಷೇತ್ರಗಳಲ್ಲಿ ಟಿಕೆಟ್ ನೀಡಿ ಚುನಾವಣೆ ಗೆಲ್ಲುವ ಅವಕಾಶಗಳಿಗಾಗಿ ಅಣಿಗೊಳಿಸಿದ್ದಾರೆ.

ಈ ಹಿಂದೆ 2020 ರಲ್ಲಿ ನಡೆದ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಕೂಟ 125 ಸ್ಥಾನಗಳನ್ನು ಗಳಿಸಿದ್ದರೆ, ಮಹಾಘಟಬಂಧನ ಕೂಟವು 110 ಕ್ಷೇತ್ರಗಳಲ್ಲಿ ಗೆಲುವು ದಾಖಲಿಸಿತ್ತು. ಎನ್‌ಡಿಎಯಷ್ಟೇ (ಶೇ.37) ಮತಪ್ರಮಾಣವನ್ನೂ ಯುಪಿಎ ಕೂಟವು ಪಡೆದಿತ್ತು. ಮುಖ್ಯವಾಗಿ, 144 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ರಾಷ್ಟ್ರೀಯ ಜನತಾದಳವು (ಆರ್‌ಜೆಡಿ) 75ರಲ್ಲಿ ಗೆದ್ದು, ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಆದರೆ, 70 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಕಾಂಗ್ರೆಸ್ 19ರಲ್ಲಿ ಮಾತ್ರ ಗೆದ್ದಿತ್ತು. ಅದರಿಂದ ನಿತೀಶ್ ಕುಮಾರ್ ನೇತೃತ್ವದಲ್ಲಿ ಎನ್‌ಡಿಎ ಮೈತ್ರಿಕೂಟ ಅಧಿಕ್ಕಾರಕ್ಕೇರಿ ಐದು ವರ್ಷಗಳ ಆಡಳಿತ ಮುಗಿಸಿದೆ.

ಬಿಹಾರದಲ್ಲಿ ಮತದಾರ ಚಲಾಯಿಸುವ ಪ್ರತಿ ಮತಕ್ಕೂ ಮಹತ್ವವಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮಹಾಘಟಬಂಧನ್ ವಿಜಯದ ಹೊಸ್ತಿಲಲ್ಲಿ ಎಡವಿತ್ತು. ಎರಡು ಬಣಗಳ ನಡುವಿನ ಅಂತರ 12 ಸೀಟುಗಳಾಗಿತ್ತು ಮತ್ತು ಕೇವಲ 11,150 ಮತಗಳಾಗಿದ್ದವು. 2020 ರಲ್ಲಿ 52 ಕ್ಷೇತ್ರಗಳ ಮತಗಳ ಅಂತರ 5,000ಕ್ಕೂ ಕಡಿಮೆ ಇತ್ತು. ಇದರಲ್ಲಿ ವಿರೋಧಿ ಬಣ 27 ಹಾಗೂ ಎನ್ಡಿಎ 24 ಗೆದ್ದಿತ್ತು. ಈ ಬಾರಿಯೂ ಇದೇ ಸ್ಥಾನಗಳಲ್ಲಿ ತೀವ್ರ ಹಣಾಹಣಿ ಇದ್ದು, ಎರಡೂ ಬಣಗಳ ಹಣೆಬರಹ ನಿರ್ಧರಿಸಬಹುದು. ತೀವ್ರ ಹಣಾಹಣಿ ನಡೆಯಲಿದೆ ಎಂದು ನಿರೀಕ್ಷಿಸಲಾದ ಕ್ಷೇತ್ರಗಳಲ್ಲಿ ಅತಿ ಹಿಂದುಳಿದ ವರ್ಗಗಳಿಗೆ ಸೇರಿದ ಮತದಾರರು ನಿರ್ಣಾಯಕ ಪಾತ್ರ ವಹಿಸಲಿದ್ದಾರೆ ಎಂದು ಹೇಳಲಾಗುತ್ತಿದ್ದು, ಇಬಿಸಿಗಳಲ್ಲಿ 130 ಉಪಜಾತಿಗಳಿವೆ ಈ ಪೈಕಿ 120ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ನಿಶಾದ ತೆಲೀ, ಲೋಹಾರ್ ಮತ್ತು ಕುವಪ್ವಾರ್ ಜಾತಿಗಳಿಗೆ ಸೇರಿದವರು ನಿರ್ಣಾಯಕರಾಗಿದ್ದಾರೆ.

ಆರ್ಜೆಡಿ ನಾಯಕ ತೇಜಸ್ವಿ ಯಾದವ್ ಅವರನ್ನು ತನ್ನ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಲು ಕಾಂಗ್ರೆಸ್ ಮತ್ತು ಸಿಪಿಐ (ಎಂ–ಎಲ್) ಹಿಂದೇಟು ಹಾಕುತ್ತಿದ್ದವು. ಕೊನೆಗೂ, ಮಿತ್ರಪಕ್ಷಗಳು ಆರ್ಜೆಡಿಗೆ ಮಣಿದು, ತೇಜಸ್ವಿ ನಾಯಕತ್ವಕ್ಕೆ ಮಣೆ ಹಾಕಿವೆ. ಅಕಸ್ಮಾತ್ ತೇಜಸ್ವಿ ಅವರನ್ನು ನಾಯಕನೆಂದು ಘೋಷಿಸಿದರೆ, ಅವರ ತಂದೆ–ತಾಯಿಯರಾದ ಲಾಲು ಪ್ರಸಾದ್ ಮತ್ತು ರಾಬ್ರಿ ದೇವಿಯವರ 15 ವರ್ಷದ ಸರ್ಕಾರದಲ್ಲಿ ನಡೆದಂತಹ ಯಾದವ ಸಮುದಾಯದ ದರ್ಪ, ಯಾದವೇತರರ ಮೇಲಿನ ದಬ್ಬಾಳಿಕೆ, ಭ್ರಷ್ಟಾಚಾರ ಇವೆಲ್ಲಾ ಕಾರಣಗಳಿಂದಾಗಿ ಮುಂದುವರಿದ ಜಾತಿಗಳು, ಯಾದವೇತರ ಹಿಂದುಳಿದ ವರ್ಗಗಳು –ಮತ್ತು ಪರಿಶಿಷ್ಟ ಜಾತಿಗಳು ಮಹಾಘಟಬಂಧನ್ ಮೈತ್ರಿಯನ್ನು ಬೆಂಬಲಿಸದಿರಬಹುದು ಎಂಬ ಭಯ ಮೈತ್ರಿಕೂಟಕ್ಕಿತ್ತು. ಇನ್ನೊಂದೆಡೆ, ಎನ್ಡಿಎ ಗೆದ್ದು ನಿತೀಶ್ರನ್ನು ಮುಖ್ಯಮಂತ್ರಿ ಮಾಡದಿದ್ದರೆ ಅವರು ಮೈತ್ರಿಕೂಟ ಬಿಟ್ಟು, ಕಳೆದ ನಾಲ್ಕು ಬಾರಿ ಮಾಡಿದ ಹಾಗೆ ವಿರೋಧಿ ಬಣ ಸೇರಬಹುದೆಂಬ ಲೆಕ್ಕಾಚಾರವು ರಾಜಕೀಯ ವಲಯದ ಚಾಲ್ತಿಯಲ್ಲಿದೆ. ಆದರೂ ಸಮಾನ ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿರುವ ಬಿಜೆಪಿ, ಆರ್‌ಜೆಡಿ ಮತ್ತು ಜೆಡಿಯು ಅತಿ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲುವ ಅವಕಾಶವಿದ್ದು ಇವರೊಂದಿಗೆ ಯಾರು ರಾಜ್ಯಸರ್ಕಾರದ ಚುಕ್ಕಾಣಿ ಹಿಡಿಯುತ್ತಾರೆ ಎಂಬುದು ಯಕ್ಷಪ್ರಶ್ನೆಯಾಗಿದೆ.

ನಿತೀಶ್ ಕುಮಾರ್‌ರನ್ನು ಮುಖ್ಯಮಂತ್ರಿ ಮಾಡದಿದ್ದರೆ ಅವರು ಮೈತ್ರಿಕೂಟ ಬಿಟ್ಟು, ಕಳೆದ ನಾಲ್ಕು ಬಾರಿ ಮಾಡಿದ ಹಾಗೆ ವಿರೋಧಿ ಬಣ ಸೇರಬಹುದೆಂಬ ಭಯವಿದ್ದು ಎಲ್ಲಾ ನಕಾರಾತ್ಮಕ ಅಂಶಗಳ ಹೊರತಾಗಿಯೂ ನಿತೀಶ್ ಇನ್ನೂ ಜನಪ್ರಿಯತೆ ಉಳಿಸಿಕೊಂಡಿದ್ದಾರೆ ಎನ್ನಲಾಗುತ್ತಿದೆ. ಕಳೆದ 19 ವರ್ಷಗಳಲ್ಲಿ ಮುಖ್ಯಮಂತ್ರಿಯಾಗಿ ಮಾಡಿದ ಕೆಲವು ಒಳ್ಳೆಯ ಕಾರ್ಯಗಳು, ಯಾದವೇತರ ಹಿಂದುಳಿದ ವರ್ಗ (ಕುರ್ಮಿ–ಕೇವರಿ), ಅತಿ ಹಿಂದುಳಿದ ದಲಿತರು ಸೇರಿದಂತೆ ಮಹಿಳೆಯರ ಬೆಂಬಲ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರಿಗಿದೆ.

# ಬಿಹಾರದಲ್ಲಿ ಎನ್‌ಡಿಎ ಮೈತ್ರಿಕೂಟಕ್ಕೆ ಐತಿಹಾಸಿಕ ಗೆಲುವು

ಬಿಹಾರ: ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಐತಿಹಾಸಿಕ ವಿಜಯ ಸಾಧಿಸಿದ್ದು, ಎನ್‌ಡಿಎ ಮೈತ್ರಿಕೂಟ ಮತ್ತೆ ಅಧಿಕಾರ ಹಿಡಿಯುವುದು ನಿಶ್ಚಿತವಾಗಿದೆ. ಜೆಡಿಯುನ ನಿತೀಶ್‌ಕುಮಾರ್ ಮತ್ತೆ ಮುಖ್ಯಮಂತ್ರಿ ಗದ್ದುಗೆಗೇರಲಿದ್ದು, ಬಿಹಾರದಲ್ಲಿ ಎನ್‌ಡಿಎ ಆಡಳಿತಕ್ಕೆ ಜನ ಆಶೀರ್ವಾದ ಮಾಡಿದ್ದಾರೆ.

ಬಿಹಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಹಾರ ಮುಖ್ಯಮಂತ್ರಿ ನಿತೀಶ್‌ಕುಮಾರ್ ನಾಯಕತ್ವಕ್ಕೆ ಜನ ಮನ್ನಣೆ ನೀಡಿದ್ದಾರೆ.

ಬಿಹಾರ ವಿಧಾನಸಭೆಯ ಚುನಾವಣೆಯ ಫಲಿತಾಂಶ ಪ್ರಕಟವಾಗಿದ್ದು, ಎನ್‌ಡಿಎ ಅಭೂತಪೂರ್ವ ಗೆಲುವು ಸಾಧಿಸಿದ್ದರೆ, ಆರ್‌ಜೆಡಿ–ಕಾಂಗ್ರೆಸ್ ನೇತೃತ್ವದ ಮಹಾಘಟ ಬಂಧನ್‌ಗೆ ಭಾರೀ ಹಿನ್ನಡೆಯಾಗಿದ್ದು, ಗೆಲುವಿನ ನಿರೀಕ್ಷೆಯಲ್ಲಿದ್ದ ಆರ್‌ಜೆಡಿ–ಕಾಂಗ್ರೆಸ್ ಎರಡೂ ಪಕ್ಷಗಳು ಮುಖಭಂಗಕ್ಕೆ ಒಳಗಾಗಿವೆ.

ಬಿಹಾರದಲ್ಲಿ ಬಿಜೆಪಿ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದು, 80ಕ್ಕೂ ಹೆಚ್ಚು ಸ್ಥಾನಗಳಲ್ಲಿ ಮುನ್ನಡೆ ಸಾಧಿಸುವ ಮೂಲಕ ಬಿಹಾರದಲ್ಲಿ ಪ್ರಬಲ ರಾಜಕೀಯ ಶಕ್ತಿಯಾಗಿ ಬಿಜೆಪಿ ರೂಪುಗೊಂಡಿರುವುದು ಈ ಫಲಿತಾಂಶದಿಂದ ದೃಢಪಟ್ಟಿದೆ.

ಬಿಹಾರದ ಒಟ್ಟು 243 ವಿಧಾನಸಭಾ ಸ್ಥಾನಗಳ ಪೈಕಿ ಜೆಡಿಯು, ಬಿಜೆಪಿ ಹಾಗೂ ಎಲ್‌ಜೆಪಿ ಪಕ್ಷಗಳನ್ನೊಳಗೊಂಡ ಎನ್‌ಡಿಎ ಮೈತ್ರಿಕೂಟ ದ್ವಿಶತಕ ಬಾರಿಸಿದ್ದು 200ಕ್ಕೂ ಹೆಚ್ಚು ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿದ್ದು, ಆರ್‌ಜೆಡಿ, ಕಾಂಗ್ರೆಸ್, ಸಿಪಿಐ ಪಕ್ಷಗಳನ್ನೊಳಗೊಂಡ ಮಹಾಘಟ ಬಂಧನ್ 36 ಸ್ಥಾನಗಳಲ್ಲಿ ಮಾತ್ರ ಮುನ್ನಡೆ ಸಾಧಿಸಿವೆ.

ಇದೇ ಮೊದಲ ಬಾರಿಗೆ ಚುನಾವಣಾ ಕಣಕ್ಕಿಳಿದಿದ್ದ ರಾಜಕೀಯ ಚಾಣಕ್ಯ ಪ್ರಶಾಂತ್ ಕಿಶೋರ್ ನೇತೃತ್ವದಲ್ಲಿ ಜನಸುರಾಜ್ ಪಕ್ಷ ಖಾತೆ ತೊರೆಯಲು ವಿಫಲವಾಗಿದೆ.

ಕಳೆದ ನ. 6 ಮತ್ತು 11 ರಂದು 2 ಹಂತಗಳಲ್ಲಿ ಬಿಹಾರ ವಿಧಾನಸಭೆಗೆ ಚುನಾವಣೆ ನಡೆದಿತ್ತು. ಎರಡು ಹಂತಗಳಲ್ಲೂ ಸೇರಿ ಅತ್ಯಧಿಕ ಶೇ. 66.91 ರಷ್ಟು ದಾಖಲೆಯ ಮತದಾನವಾಗಿತ್ತು. ಈ ಬಾರಿ ಮಹಿಳಾ ಮತದಾರರು ಇತಿಹಾಸದಲ್ಲೇ ದಾಖಲೆ ಎನ್ನುವಂತೆ ಮತ ಚಲಾಯಿಸಿದ್ದರು. ಜತೆಗೆ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದೆ ಯಾವುದೇ ಕ್ಷೇತ್ರಗಳಲ್ಲಿ ಮರು ಮತದಾನ ಸಹ ನಡೆದಿರಲಿಲ್ಲ. ಇದು ಸಹ ಬಿಹಾರದ ಮಟ್ಟಿಗೆ ದಾಖಲೆ ಎಂದು ಹೇಳಲಾಗಿದೆ.

ಈ ಚುನಾವಣೆಯಲ್ಲಿ ಬಿಹಾರದ ಹಾಲಿ ಮುಖ್ಯಮಂತ್ರಿ ನಿತೀಶ್‌ಕುಮಾರ್ ಚುನಾವಣಾ ಕಣಕ್ಕೆ ಇಳಿದಿರಲಿಲ್ಲ. ಅವರು ಬಿಹಾರದ ವಿಧಾನ ಪರಿಷತ್ ಸದಸ್ಯರಾಗಿದ್ದಾರೆ. ಮಹಾಘಟ ಬಂಧನ್‌ನ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಲಾಗಿದ್ದ ಮಾಜಿ ಮುಖ್ಯಮಂತ್ರಿ ಲಾಲು



ಪ್ರಸಾದ್ ಯಾದವ್ ಪುತ್ರ ತೇಜಸ್ವಿ ಯಾದವ್ ಅಲ್ಪಮಟ್ಟಿನ ಮುನ್ನಡೆ ಕಾಯ್ದುಕೊಂಡಿದ್ದು, ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಲಾಲೂಪ್ರಸಾದ್ ಯಾದವ್ ಹಾಗೂ ರಾಪ್ಪಿದೇವಿ ಸಹ ಸ್ಪರ್ಧಿಸಿರಲಿಲ್ಲ. ಮೇವು ಹಗರಣದಲ್ಲಿ ಜೈಲು ಶಿಕ್ಷೆಗೆ ಗುರಿಯಾಗಿದ್ದ ಕಾರಣ ಲಾಲುಪ್ರಸಾದ್ ಯಾದವ್ ಚುನಾವಣೆಯಲ್ಲಿ ಸ್ಪರ್ಧಿಸುವಂತಿರಲಿಲ್ಲ.

ಈ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಯು ತಲಾ 101 ಸ್ಥಾನಗಳಲ್ಲಿ ಸ್ಪರ್ಧಿಸಿದ್ದು, ಈ ಪೈಕಿ ಜೆಡಿಯು 81 ಸ್ಥಾನಗಳಲ್ಲಿ, ಬಿಜೆಪಿ 91 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿದ್ದು, ಲೋಕ ಜನಶಕ್ತಿ ಪಕ್ಷ 21 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿದೆ.

ಈ ಚುನಾವಣೆಯಲ್ಲಿ ಕಾಂಗ್ರೆಸ್ 61 ಸ್ಥಾನಗಳಲ್ಲಿ ಸ್ಪರ್ಧಿಸಿದ್ದು, 4 ಕ್ಷೇತ್ರಗಳಲ್ಲಿ ಮಾತ್ರ ಮುನ್ನಡೆ ಸಾಧಿಸಿ ಕಳಪೆ ಪ್ರದರ್ಶನ ತೋರಿದೆ. ಆರ್‌ಜೆಡಿ 143 ಕ್ಷೇತ್ರಗಳಲ್ಲಿ ಸ್ಪರ್ಧಿಸಿ 27 ಕ್ಷೇತ್ರಗಳಲ್ಲಿ ಮಾತ್ರ ಮುನ್ನಡೆ ಸಾಧಿಸಿದೆ. ಚಿರಾಗ್ ಪಾಸ್ವಾನ್ ನೇತೃತ್ವದ ಎಲ್‌ಜೆಪಿ 21 ಕ್ಷೇತ್ರಗಳಲ್ಲಿ ಮುನ್ನಡೆಯಲ್ಲಿದೆ. ಹೆಚ್.ಕೆ.ಎಂ. 4 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿವೆ. ಮೇಲ್ಕಂಡ ಎಲ್ಲಾ ಫಲಿತಾಂಶದ ವಿವರಗಳು ಎಣಿಕೆ ಪ್ರಗತಿಯಲ್ಲಿದ್ದಾಗ ಕಂಡಿದ್ದು. ಅಂತಿಮ ಫಲಿತಾಂಶವು ಚುನಾವಣಾ ಆಯೋಗ ಅಧಿಕೃತವಾಗಿ ಪ್ರಕಟಿಸಿದ ನಂತರ ತಿಳಿದುಬರುತ್ತದೆ.

# ದೆಹಲಿಯಲ್ಲಿ ಉಗ್ರರ ದಾಳಿ: ಕಾರ್ ಬಾಂಬ್ ಸ್ಫೋಟದಲ್ಲಿ 13 ಮಂದಿ ಸಾವು




**ರಾ**ಷ್ಟ್ರ ರಾಜಧಾನಿ ದೆಹಲಿಯ ಐತಿಹಾಸಿಕ ಕೆಂಪುಕೋಟೆಯ ಮೆಟ್ರೋ ನಿಲ್ದಾಣದ ಬಳಿ ಸೋಮವಾರ ರಾತ್ರಿ ನಡೆದ ಕಾರು ಸ್ಫೋಟದ ತನಿಖೆಗೆ ಐಬಿ, ಎನ್ಐಎ, ಎನ್ಎಸ್ಜಿ ಹಾಗೂ ಸ್ಥಳೀಯ ಪೊಲೀಸರ ವಿಶೇಷ ತಂಡವನ್ನು ರಚಿಸಲಾಗಿದ್ದು, ಬಾಂಬ್ ಸ್ಫೋಟದ ಬೆನ್ನಲ್ಲೇ ದೇಶದ ಎಲ್ಲೆಡೆ ಕಟ್ಟೆಚ್ಚರ ವಹಿಸಲಾಗಿದ್ದು, ಕೇಂದ್ರ ಗೃಹ ಸಚಿವ ಅಮಿತ್ ಶಾ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಭದ್ರತಾ ಪರಿಶೀಲನಾ ಸಭೆ ನಡೆಯಿತು.

ಈ ಮಧ್ಯೆ ಬಾಂಬ್ ಸ್ಫೋಟದಲ್ಲಿ ಮೃತಪಟ್ಟವರ ಸಂಖ್ಯೆ 12ಕ್ಕೇರಿದೆ. ಸ್ಫೋಟದಲ್ಲಿ ಗಾಯಗೊಂಡಿದ್ದ ಇನ್ನೂ ಮೂವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಅಸುನೀಗಿದ್ದಾರೆ.

ದೆಹಲಿಯಲ್ಲಿ ಸೋಮವಾರ ಪ್ರಬಲ ಕಾರು ಸ್ಫೋಟ ನಡೆದ ಬೆನ್ನಲ್ಲೇ ಗೃಹ ಸಚಿವ ಅಮಿತ್ ಶಾ ಅಧ್ಯಕ್ಷತೆಯಲ್ಲಿ ದೆಹಲಿಯ ಕರ್ತವ್ಯ ಭವನದಲ್ಲಿರುವ ಗೃಹ ಸಚಿವಾಲಯದ ಕಚೇರಿಯಲ್ಲಿ ಉನ್ನತ ಮಟ್ಟದ ಭದ್ರತಾ ಪರಿಶೀಲನಾ ಸಭೆ ನಡೆದಿದ್ದು, ಸ್ಫೋಟದ ತನಿಖೆಗೆ ವಿಶೇಷ ತನಿಖಾ ತಂಡವನ್ನು ರಚಿಸುವ ತೀರ್ಮಾನ ಕೈಗೊಳ್ಳಲಾಗಿದೆ.

ಈ ವಿಶೇಷ ತನಿಖಾ ತಂಡದಲ್ಲಿ ಗುಪ್ತಚರ ದಳದ ರಾಷ್ಟ್ರೀಯ ತನಿಖಾದಳ, ವಿಶೇಷ ಭದ್ರತಾ ಪಡೆಯ ಅಧಿಕಾರಿಗಳು, ಹಾಗೂ ಪೊಲೀಸ್ ಅಧಿಕಾರಿಗಳು ಇರಲಿದ್ದು, ಈ ತಂಡ ಎಲ್ಲಾ ಆಯಾಮದಿಂದಲೂ ತನಿಖೆ ನಡೆಸಲಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾರವರ ನೇತೃತ್ವದಲ್ಲಿ ನಡೆದಿರುವ ಈ ಸಭೆಯಲ್ಲಿ ಕೇಂದ್ರ ಗೃಹ ಕಾರ್ಯದರ್ಶಿ ಗೋವಿಂದ ಮೋಹನ್, ರಾ ಮತ್ತು ಎನ್ಐಎ ತನಿಖಾ ಸಂಸ್ಥೆಗಳ ಮುಖ್ಯಸ್ಥರು, ದೆಹಲಿ ಪೊಲೀಸ್ ಆಯುಕ್ತರು ಸೇರಿದಂತೆ ಗೃಹ ಇಲಾಖೆಯ ಉನ್ನತಾಧಿಕಾರಿಗಳು ಪಾಲ್ಗೊಂಡಿದ್ದಾರೆ.

ದೆಹಲಿಯ ಬಾಂಬ್ ಸ್ಫೋಟದ ಹಿನ್ನೆಲೆಯಲ್ಲಿ ಬುಧವಾರ ಸಂಜೆ ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಕೇಂದ್ರ ಸಚಿವ ಸಂಪುಟದ ಭದ್ರತಾ ಸಮಿತಿಯ ಸಭೆ ನಡೆಯಲಿದೆ. ಈ ಸಭೆಯಲ್ಲಿ ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತೆ ವಿಸ್ತೃತ ಚರ್ಚೆಗಳು ನಡೆಯಲಿದ್ದು, ದೇಶದ ಭದ್ರತಾ ದೃಷ್ಟಿಯಿಂದ ಏನೆಲ್ಲಾ ಕ್ರಮಗಳು ಕೈಗೊಳ್ಳಬೇಕು ಎಂಬ ಸಭೆಯಲ್ಲಿ ಚರ್ಚೆ ನಡೆಸಲಾಗುತ್ತದೆ.

ಈ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ವಿದೇಶಾಂಗ ಸಚಿವ ಜೈಶಂಕರ್, ಪ್ರಧಾನಿಗಳ ಭದ್ರತಾ ಸಲಹೆಗಾರ ಅಜಿತ್ ದೋವಲ್, ಸೇರಿದಂತೆ ವಿವಿಧ ತನಿಖಾದಳದ ಮುಖ್ಯಸ್ಥರುಗಳು ಭಾಗಿಯಾಗುವರು.

ದೆಹಲಿಯಲ್ಲಿ ಪ್ರಬಲ ಕಾರು ಬಾಂಬ್ ಸ್ಫೋಟ ಸಂಭವಿಸಿದ ಬೆನ್ನಲ್ಲೆ ಇಡೀ ದೇಶದಲ್ಲಿ ಹೈ ಅಲರ್ಟ್ ಘೋಷಿಸಲಾಗಿದ್ದು, ಪ್ರಮುಖ ನಗರ, ಪಟ್ಟಣ, ಐತಿಹಾಸಿಕ ಸ್ಥಳ, ವಿಮಾನ ನಿಲ್ದಾಣ, ರೈಲ್ವೆ ನಿಲ್ದಾಣ, ಬಸ್ ನಿಲ್ದಾಣಗಳಲ್ಲಿ ಭದ್ರತೆಯನ್ನು ಬಿಗಿಗೊಳಿಸಲಾಗಿದ್ದು, ಕಟ್ಟೆಚ್ಚರ ವಹಿಸಲಾಗಿದೆ.

ದೇಶದ ರೈಲ್ವೆ ನಿಲ್ದಾಣಗಳಲ್ಲಿ ಹಾಗೂ ಬಸ್ ನಿಲ್ದಾಣಗಳಲ್ಲಿ ಹೆಚ್ಚಿನ ಭದ್ರತೆ ಒದಗಿಸಲಾಗಿದ್ದು, ಇಲ್ಲಿ ಓಡಾಡುವವರ ಮೇಲೆ ನಿಗಾ ವಹಿಸಲಾಗಿದೆ.

ರೈಲ್ವೆ ಹಾಗೂ ಬಸ್ ನಿಲ್ದಾಣಗಳಿಗೆ ಹೆಚ್ಚಿನ ಪೊಲೀಸರನ್ನು ಬಂದೋಬಸ್ತ್‌ಗೆ ನಿಯೋಜಿಸಲಾಗಿದ್ದು, ಪ್ರತಿಯೊಬ್ಬರನ್ನೂ ತಪಾಸಣೆ ಮಾಡಿ ಒಳ ಬಿಡಲಾಗುತ್ತಿದೆ. ಜತೆಗೆ ಲಗೇಜುಗಳ ಪರಿಶೀಲನೆಯೂ ನಡೆದಿದೆ.

ದೇಶದ ಎಲ್ಲಾ ವಿಮಾನ ನಿಲ್ದಾಣಗಳಲ್ಲೂ ಹೆಚ್ಚಿನ ಭದ್ರತೆ ಕಲ್ಪಿಸಲಾಗಿದ್ದು, ಭದ್ರತಾ ಸಿಬ್ಬಂದಿಗೆ ಸದಾ ಜಾಗೃತರಾಗಿರುವಂತೆ ಸೂಚನೆಯನ್ನು ನೀಡಲಾಗಿದೆ.

ಬಸ್, ರೈಲು ಮತ್ತು ವಿಮಾನ ನಿಲ್ದಾಣಗಳಲ್ಲಿ ಪ್ರಯಾಣಿಕರ ಲಗೇಜುಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗುತ್ತಿದ್ದು, ಅನುಮಾನಾಸ್ಪದ ವಸ್ತುಗಳು ಕಂಡು ಬಂದರೆ ತಕ್ಷಣವೇ ವಶಕ್ಕೆ ಪಡೆದು ಸೂಕ್ತ ಕ್ರಮ ಕೈಗೊಳ್ಳುವಂತೆಯೂ ಸೂಚನೆ ನೀಡಲಾಗಿದೆ. ಪ್ರಯಾಣಿಕರನ್ನು ಸಹ ತೀವ್ರ ತಪಾಸಣೆಗೆ ಒಳಪಡಿಸಲಾಗಿದೆ.

ರೈಲು, ವಿಮಾನ ಮತ್ತು ಬಸ್ ನಿಲ್ದಾಣಗಳ ವಾಹನಗಳ ಪಾರ್ಕಿಂಗ್ ಸ್ಥಳಗಳಲ್ಲೂ ಹೆಚ್ಚಿನ ನಿಗಾ ವಹಿಸಿ ಭದ್ರತೆಯನ್ನು ಬಿಗಿಗೊಳಿಸಿ, ಪ್ರತಿಯೊಂದು ವಾಹನಗಳ ತಪಾಸಣೆಯನ್ನು ನಡೆಸಲಾಗುತ್ತಿದೆ.

ಬಾಂಬ್ ಸ್ಫೋಟದ ಹಿಂದಿರುವವರನ್ನು ಯಾವುದೇ ಸಂದರ್ಭದಲ್ಲಿ ಬಿಡುವುದಿಲ್ಲ ಈ ಸ್ಫೋಟದ ಕಾರಣವಾಗಿರುವ ಪ್ರತಿಯೊಬ್ಬರನ್ನೂ ಪತ್ತೆಹಚ್ಚಲಾಗುವುದು ಎಂದು ಪ್ರಧಾನಿ ಮೋದಿ ಹೇಳಿದರು.

ದೆಹಲಿಯ ಕೆಂಪುಕೋಟೆ ಬಳಿ ನಡೆದ ಭೀಕರ ಬಾಂಬ್ ಸ್ಫೋಟದ ನಂತರ ಪ್ರಧಾನಿ ನರೇಂದ್ರ ಮೋದಿ ಅವರು ದಾಳಿಕೋರರಿಗೆ ಕಠೋರ ಎಚ್ಚರಿಕೆ ನೀಡಿದ್ದಾರೆ.

ಭೂತಾನ್‌ನ ಥಿಂಪು ನಗರದಲ್ಲಿ ಮಾತನಾಡಿರುವ ಅವರು ದೆಹಲಿಯ ಲಾಲ್ ಕಿಲ್ಲಾ (ರೆಡ್ ಫೋರ್ಟ್) ಬಳಿ ನಡೆದ ಈ ಆತ್ಮಘಾತುಕಾರಿ ಕಾರು ಬಾಂಬ್ ಸ್ಫೋಟದಲ್ಲಿ ಒಂಬತ್ತು ಜನರು ಸಾವನ್ನಪ್ಪಿದ್ದಾರೆ. ಈ ಘಟನೆ ಗಮನಾರ್ಹ ಭದ್ರತಾ ವ್ಯವಸ್ಥೆಗೆ ಸವಾಲು ಉಂಟುಮಾಡಿದೆ.

ಜನಸಮೂಹವನ್ನು ಕುರಿತು ಮಾತನಾಡಿದ ಪ್ರಧಾನಿ ಮೋದಿ ಅವರು, ಈ ಸ್ಫೋಟವನ್ನು "ಭೀಕರ" ಎಂದು ವರ್ಣಿಸಿದ ಪ್ರಧಾನಿ "ಪೀಡಿತ ಕುಟುಂಬಗಳ ದುಃಖವನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. ಇಂದು ಸಂಪೂರ್ಣ ರಾಷ್ಟ್ರ ಅವರ ಜೊತೆ ನಿಂತಿದೆ," ಎಂದು ಅವರು ಸಂವೇದನೆಯನ್ನು ವ್ಯಕ್ತಪಡಿಸಿದರು.

ತನಿಖೆ ನಡೆಸುತ್ತಿರುವ ಎಲ್ಲಾ ಸಂಸ್ಥೆಗಳೊಂದಿಗೆ ನಾನು ಸಂಪರ್ಕದಲ್ಲಿದ್ದೆ. ನಮ್ಮ ಸಂಸ್ಥೆಗಳು ಈ ಸಂಚಿನಲ್ಲಿ ಭಾಗಿಯಾಗಿರುವ ಎಲ್ಲರನ್ನು ಪತ್ತೆಹಚ್ಚಲಿವೆ ಎಂದು ಭರವಸೆ ನೀಡಿದರು.

ಪ್ರಧಾನಿ ಮೋದಿ ಅವರು ತಮ್ಮ ಭಾಷಣದ ಮೂಲಕ ಸಂಚುಕೋರರಿಗೆ ಕಠಿಣ ಎಚ್ಚರಿಕೆಯನ್ನು ರವಾನಿಸಿದರು. "ಭಾರತವು ಪ್ರತಿ ಉಗ್ರರನ್ನು ಮತ್ತು ಅವರ ಬೆಂಬಲಿಗರನ್ನು ಗುರುತಿಸಿ, ಪತ್ತೆಹಚ್ಚಿ, ಶಿಕ್ಷಿಸುವುದು" ಎಂದು ಪೆಹಲ್ಗಾಮ್ ದಾಳಿಯ ಸಂದರ್ಭದಲ್ಲಿ ಹೇಳಿದ್ದರು. ಕೆಲವು ವಾರಗಳ ನಂತರ, ಭಾರತವು ಪಾಕಿಸ್ತಾನ ಮತ್ತು ಪಾಕ್–ಅಕ್ರಮಿತ ಕಾಶ್ಮೀರದಲ್ಲಿರುವ ಉಗ್ರರ ಶಿಬಿರಗಳನ್ನು ಗುರಿಯಾಗಿರಿಸಿಕೊಂಡು 'ಆಪರೇಷನ್ ಸಿಂಧೂರ್' ಅನ್ನು ಆರಂಭಿಸಿತ್ತು.

ಪ್ರಧಾನಿ ಮೋದಿ ಅವರು ಭೂತಾನ್‌ಗೆ ಎರಡು ದಿನಗಳ ಭೇಟಿಯನ್ನು ಮಾಡಿದ್ದಾರೆ. ಈ ಭೇಟಿಯ ಮುಖ್ಯ ಉದ್ದೇಶ, ನೆರೆಹೊರೆಯ ರಾಜ್ಯದ ರಾಜ ಜಿಗ್ಮೆ ಸಿಂಗ್ಯೆ ವಾಂಗ್ಚುಕ್ ಅವರ 70ನೇ ಜನ್ಮದಿನದ ಆಚರಣೆಗಳಲ್ಲಿ ಭಾಗವಹಿಸುವುದಾಗಿದೆ.

ದೆಹಲಿಯ ಕಾರು ಬಾಂಬ್ ಸ್ಫೋಟದ ಬೆನ್ನಲ್ಲೇ ರಾಜ್ಯದಲ್ಲೂ ಯಾವುದೇ ಅವಘಡಗಳಾಗದಂತೆ ಕಟ್ಟೆಚ್ಚರ ವಹಿಸಲಾಗಿದ್ದು, ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಭದ್ರತೆಯನ್ನು ಬಿಗಿಗೊಳಿಸಲಾಗಿದೆ.

ವಿಮಾನ, ರೈಲು, ಬಸ್ ನಿಲ್ದಾಣ, ಪ್ರಮುಖ ಮಾರುಕಟ್ಟೆಗಳು, ಮಾಲ್‌ಗಳು, ಐತಿಹಾಸಿಕ ಸ್ಥಳಗಳು ಹಾಗೂ ದೇವಸ್ಥಾನಗಳ ಬಳಿ ಭದ್ರತೆಯನ್ನು ಬಿಗಿಗೊಳಿಸಲಾಗಿದ್ದು, ಹೆಚ್ಚಿನ ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿದೆ.

ದೆಹಲಿ ಬಾಂಬ್ ಸ್ಫೋಟದ ಬಗ್ಗೆ ಸೋಮವಾರವೇ ಆಘಾತ ವ್ಯಕ್ತಪಡಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜ್ಯದಲ್ಲೂ ಕಟ್ಟೆಚ್ಚರ ವಹಿಸುವಂತೆ ಪೊಲೀಸ್ ಮಹಾನಿರ್ದೇಶಕರಿಗೆ ಸೂಚನೆ ನೀಡಿದ್ದರು.

ಮುಖ್ಯಮಂತ್ರಿಗಳ ಸೂಚನೆಯಂತೆ ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ಬಹುತೇಕ ನಗರಗಳಲ್ಲಿ ಪೊಲೀಸ್ ಕಾವಲನ್ನು ಬಿಗಿಗೊಳಿಸಲಾಗಿದ್ದು, ಪ್ರತಿ ಜಿಲ್ಲೆಗಳಿಗೆ ಪ್ರವೇಶಿಸುವ ವಾಹನಗಳ ಪರಿಶೀಲನೆ ನಡೆಸಲಾಗುತ್ತಿದೆ.

ಹಾಗೆಯೇ ಪ್ರವಾಸಿ ಸ್ಥಳ, ದೇವಸ್ಥಾನಗಳಲ್ಲೂ ಹೆಚ್ಚಿನ ಪೊಲೀಸರನ್ನು ಬಂದೋಬಸ್ತ್‌ಗೆ ನಿಯೋಜಿಸಲಾಗಿದ್ದು, ಪ್ರತಿಯೊಬ್ಬರ ಮೇಲೂ ನಿಗಾ ವಹಿಸಲಾಗಿದೆ.

**ದಾಳಿಕೋರರಿಗೆ ತಕ್ಕ ಶಾಸ್ತಿ:** ನವದೆಹಲಿ: ದೆಹಲಿಯ ಕೆಂಪು ಕೋಟೆಯ ಬಳಿ ಕಾರು ಸ್ಫೋಟ ಪ್ರಕರಣದ ಹಿಂದಿನ ರೂವಾರಿಗಳನ್ನು ಯಾವುದೇ ಕಾರಣಕ್ಕೂ ಬಿಡುವುದಿಲ್ಲ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಎಚ್ಚರಿಕೆ ನೀಡಿದ್ದಾರೆ.

ದೆಹಲಿ ಸ್ಫೋಟದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ರಕ್ಷಣಾ ಸಚಿವರು, "ದೆಹಲಿ ದುರಂತದಲ್ಲಿ ಪ್ರಾಣ ಕಳೆದುಕೊಂಡುವರ ಕುಟುಂಬಕ್ಕೆ ಸಂತಾಪ ಸೂಚಿಸುತ್ತೇನೆ. ತಮ್ಮವರನ್ನು ಕಳೆದುಕೊಂಡ ಕುಟುಂಬಗಳಿಗೆ ದೇವರು ದುಃಖ ಭರಿಸುವ ಶಕ್ತಿ ನೀಡಲಿ. ದೇಶದ ಜನರಿಗೆ ನಾನು ಭರವಸೆ ನೀಡುತ್ತೇನೆ ಪ್ರಕರಣದ ಸಮಗ್ರ ತನಿಖೆ ನಡೆಸುತ್ತಿವೆ.

ದುರಂತಕ್ಕೆ ಕಾರಣ ಆದವರನ್ನು ಕಟಕಟೆಗೆ ತಂದು ನಿಲ್ಲಿಸು ತ್ತೇವೆ. ಅವರನ್ನು ಯಾವುದೇ ಸಂದರ್ಭ ಬಂದರೂ ಬಿಡುವುದಿಲ್ಲ," ಎಂದು ಖಡಕ್ ಎಚ್ಚರಿಕೆ ಕೊಟ್ಟಿದ್ದಾರೆ.

**ಕಾರಿನ ಮುಂಭಾಗದಲ್ಲೂ ಸ್ಫೋಟಕ ಇಟ್ಟಿರುವ ಶಂಕೆ:** ಕೆಂಪುಕೋಟೆ ಬಳಿಯ ಕಾರು ಸ್ಫೋಟ ಪ್ರಕರಣ ಸಂಬಂಧ ದೆಹಲಿ ಪೊಲೀಸರು ವಿವಿಧ ಆಯಾಮಗಳಿಂದ ತನಿಖೆ ಚುರುಕುಗೊಳಿಸಿದ್ದಾರೆ. ಪ್ರಾಥಮಿಕ ತನಿಕೆಯಲ್ಲಿ ಸ್ಫೋಟಗೊಂಡ ಐ20 ಕಾರಿನ ಮುಂಭಾಗದಲ್ಲೂ ಸ್ಫೋಟಕ ಇಟ್ಟಿರುವ ಶಂಕೆ ವ್ಯಕ್ತವಾಗಿದೆ.

ಸ್ಫೋಟಕ್ಕೂ ಮೊದಲು ಸುನೇಹ್ರಿ ಮಸೀದಿಯ ಪಾರ್ಕಿಂಗ್ ಜಾಗದಲ್ಲಿ ಮೂರು ಗಂಟೆ ಕಾರು ಪಾರ್ಕ್ ಆಗಿತ್ತು. ಕಾರು ಪಾರ್ಕಿಂಗ್ ಸ್ಥಳಕ್ಕೆ ಮಧ್ಯಾಹ್ನ 3:19ಕ್ಕೆ ಪ್ರವೇಶಿಸಿ ಸಂಜೆ 6:30ರ ವೇಳೆ ನಿರ್ಗಮಿಸಿದೆ. ನಿರ್ಗಮಿಸಿದ ನಂತರ ಕೆಂಪು ಕೋಟೆಯ ಬಳಿ ಸಂಜೆ 6:52ಕ್ಕೆ ಸ್ಫೋಟಗೊಂಡಿದೆ.

ಕಾರು ಪಾರ್ಕಿಂಗ್ ಜಾಗಕ್ಕೆ ಬರುವಾಗಲೇ ಎಂಜಿನ್‌ನಲ್ಲಿ ಸ್ಫೋಟಕ ತುಂಬಿದ ಬಗ್ಗೆ ಅನುಮಾನ ವ್ಯಕ್ತವಾಗಿದೆ. ಕಾರಿನ ಮುಂಭಾಗ ಬಾನೆಟ್ ಸರಿಯಾಗಿ ಲಾಕ್ ಆಗದಿರುವ ದೃಶ್ಯ ವಿಡಿಯೋದಲ್ಲಿ ಸೆರೆಯಾಗಿದೆ. ಎಂಜಿನ್ ಮೇಲೆ ಸ್ಫೋಟಕ ಇಟ್ಟಾಗ ಅದರ ತೀವ್ರತೆ ಮತ್ತಷ್ಟು ಹೆಚ್ಚಾಗುತ್ತದೆ. ಹಿಂಬದಿ ಡಿಕ್ಕಿಯಲ್ಲೂ ಸ್ಫೋಟಕ ಇಟ್ಟ ಕಾರಣ ಸ್ಫೋಟದ ತೀವ್ರತೆಗೆ ಬೆಂಕಿ ಹಲವು ಕಾರುಗಳಿಗೆ ತಗುಲಿದೆ ಎಂದು ಅಂದಾಜಿಸಲಾಗುತ್ತಿದೆ. ಸ್ಫೋಟ ಗೊಂಡ ಐ20 ಕಾರಿನಲ್ಲಿ ಫರಿದಾಬಾದ್ ವೈದ್ಯ ಡಾ. ಉಮರ್ ಯು ನಬಿ ಸೂಸೈಡ್ ಬಾಂಬರ್ ಆಗಿ ಕೆಲಸ ಮಾಡಿರುವ ಶಂಕೆ ವ್ಯಕ್ತವಾಗಿದೆ.

2,900 ಕೆಜಿ ಸ್ಫೋಟಕ ಪತ್ತೆಯಾದ ಫರಿದಾಬಾದ್ ಮಾಡ್ಯೂಲ್ ಜೊತೆ ಸಂಬಂಧ ಹೊಂದಿದ್ದ ಪುಲ್ವಾಮಾ ಮೂಲದ ಉಮರ್ ಯು ನಬಿ ಕಾರಿನಲ್ಲಿ ಇದ್ದಿರಬಹುದು ಎಂಬ ಅನುಮಾನ ಈಗ ವ್ಯಕ್ತವಾಗಿದೆ.



# ಕನ್ನಡ ಕರ್ನಾಟಕ ಕನ್ನಡಿಗ ನಡೆದು ಬಂದ ದಾರಿ



**'ಕ**ರ್ನಾಟಕ' ಎಂಬ ಶಬ್ದದ ಉಲ್ಲೇಖ ಕ್ರಿ.ಪೂ. 3-4ನೆಯ ಶತಮಾನದಲ್ಲಿದ್ದ ಪಾಣಿನಿಯ ಸಂಸ್ಕೃತ ವ್ಯಾಕರಣ ಗ್ರಂಥದಲ್ಲಿ ಕಂಡುಬರುತ್ತದೆ. ಅಲ್ಲಿ ಅತನು 'ಕರ್ಣಾಧನ ಎಂಬ ಒಂದು ಗೋತ್ರದ ಜನರ ವಿಚಾರ ಹೇಳಿದ್ದಾನೆ. ಆದರೆ ಒಂದು ಪ್ರದೇಶವಾಗಿ ಈ ಶಬ್ದದ ಮೊದಲ ಉಲ್ಲೇಖ ನಮಗೆ ಕಂಡುಬರುವುದು 'ಮಹಾಭಾರತ'ದಲ್ಲಿ ಈ ಗ್ರಂಥದ ರಚನೆ ಸುಮಾರು 2000 ವರ್ಷಗಳಷ್ಟು ಹಿಂದಿನದಾಗಿದ್ದು ಅದರ 'ಭೀಷ್ಮಪರ್ವ'ದಲ್ಲಿ ಭಾರತದ ದಕ್ಷಿಣ ಭಾಗದ ವರ್ಣನೆ ಹೀಗಿದೆ:

**ಆಥಾಪರೇ ಜನಪದಾಃ ದಕ್ಷಿಣಾ ಭರತರ್ಷಭ**
**ದ್ರವಿಡಾ: ಕೇರಳಾ: ಪ್ರಾಚ್ಯಾ ಮೂಷಿಕಾ ವನವಾಸಿಕಾಃ**
**ಕರ್ಣಾಟಕಾ ಮಹಿಷಕಾ ವಿಕಲ್ಪಾ ಮೂಷಕಸ್ತಥಾ ।**

ಆದರೆ ಈ 'ಕರ್ಣಾಟಕಾ' ಎಂಬ ಶಬ್ದ 'ಮಹಾಭಾರತ'ದ ಕುಂಭಕೋಣಂ ಆವೃತ್ತಿಯಲ್ಲಷ್ಟೇ ಇದೆ. ಪುಣೆ ಆವೃತ್ತಿಯಲ್ಲಿ ಕುಂತಳ ಅಥವಾ ಉನ್ನತ್ಮಕ ಎಂಬ ಶಬ್ದ ಕರ್ಣಾಟಕಕ್ಕೆ ಪರ್ಯಾಯವಾಗಿ ಬಳಕೆಯಾಗಿದೆ. ಉನ್ನತ್ಮಕ ಎಂದರೆ 'ಎತ್ತರದ ನೆಲ' ಎಂದಷ್ಟೇ ಅರ್ಥವಾಗಿದ್ದು, ಕರ್ನಾಟಕ ಎಂಬ ಶಬ್ದದ ಅರ್ಥವೂ ಇದೇ. ಕುಂತಳ ಎಂಬ ಹೆಸರೂ ಕರ್ನಾಟಕಕ್ಕೆ ಇತ್ತು.

ಹಲ್ಮಿಡಿ ಶಾಸನವು ಕ್ರಿ.ಶ. 450 ರಲ್ಲಿ ಕನ್ನಡ ಲಿಪಿಯಲ್ಲಿ ರಚಿಸಲ್ಪಟ್ಟಿರುವ ಮೊಟ್ಟ ಮೊದಲ ಶಿಲಾಶಾಸನ. ಇದು ಹಾಸನ ಜಿಲ್ಲೆಯ ಬಳಿಯಲ್ಲಿರುವ ಹಲ್ಮಿಡಿ ಎಂಬ ಸ್ಥಳದಲ್ಲಿ 1936ರಲ್ಲಿ ಡಾ. ಎಂ.ಎಚ್.ಕೃಷ್ಣ ಎಂಬುವವರಿಂದ ಸಂಶೋಧಿಸಲ್ಪಟ್ಟಿತು. ಇದು ಹದಿನಾರು ಸಾಲುಗಳಲ್ಲಿ ಕದಂಬ ವಂಶದ ಕಾಕುಸ್ಥವರ್ಮ ದೊರೆಯು ಬರೆಸಿದ ದತ್ತಿಶಾಸನವಾಗಿದ್ದು ಕನ್ನಡ ಇತಿಹಾಸದಲ್ಲಿ ದೊರೆತ ಪ್ರಥಮ ಕನ್ನಡ ಶಿಲಾಶಾಸನವಾಗಿರುತ್ತದೆ.

1956 ಕ್ಕೆ ಮುಂಚೆ ಬ್ರಿಟೀಷರ ಆಳ್ವಿಕೆಯ ಕಾಲದಿಂದ ಕರ್ನಾಟಕ ರಾಜ್ಯವು ತನ್ನ ಗತವೈಭವವನ್ನು ಕಳೆದು ಕೊಂಡು 20 ಭಾಗಗಳಾಗಿ ಹರಿದು ಹಂಚಿಹೋಗಿತ್ತು. ಅದರಲ್ಲಿಯೂ ಮುಖ್ಯವಾಗಿ ಕರ್ನಾಟಕ ನಾಲ್ಕು ಮುಖ್ಯ ಭಾಗಗಳಾಗಿ ತುಂಡರಿಸಲ್ಪಟ್ಟಿತ್ತು. ಅವುಗಳೆಂದರೆ - 1. ಮೈಸೂರು ಸಂಸ್ಥಾನ 2. ಹೈದ್ರಾಬಾದ್ ಸಂಸ್ಥಾನ, 3. ಬಾಂಬೆ ಸಂಸ್ಥಾನ ಮತ್ತು 4. ಮದ್ರಾಸ್ ಸಂಸ್ಥಾನ. ಈ ನಾಲ್ಕೂ ಸಂಸ್ಥಾನದ ಪ್ರದೇಶಗಳಲ್ಲಿ ಕನ್ನಡಿಗರೇ ಅಧಿಕ ಸಂಖ್ಯೆಯಲ್ಲಿದ್ದರೂ ಸಹ ಆಡಳಿತಗಾರರ ಪ್ರಭಾವದಿಂದ ಬೇರೆ. ಬೇರೆ ಭಾಷೆಗಳನ್ನು ಕಲಿತು ಕನ್ನಡವನ್ನೇ ಮೂಲೆಗುಂಪು ಮಾಡುವ ಪರಿಸ್ಥಿತಿಗೆ ಕನ್ನಡಿಗರು ತಲುಪಿದ್ದರು. ಆದ್ದರಿಂದ ಈ ನಾಡಿಗೆ ಕರುನಾಡು ಅಥವಾ ಕರ್ನಾಟಕ ಎಂದು ನಾಮಕರಣ ಮಾಡುವುದು ಸುಲಭದ ಕೆಲಸವಾಗಿರಲಿಲ್ಲ.

ಇಂತಹ ಸಂದರ್ಭದಲ್ಲಿ ಕನ್ನಡಿಗರ ಅಸ್ಮಿತೆಗಾಗಿ ಕರ್ನಾಟಕ ವಿದ್ಯಾವರ್ಧಕ ಸಂಘ 30 ಜುಲೈ 1890ರಲ್ಲಿ ರಾ.ಹ. ದೇಶಪಾಂಡೆ ಅವರ ನೇತೃತ್ವದಲ್ಲಿ ಸ್ಥಾಪನೆಯಾಯಿತು. ಇದಾದ ನಂತರ 1915ರಲ್ಲಿ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಸರ್.ಎಂ.ವಿಶ್ವೇಶ್ವರಯ್ಯನವರ ಪ್ರೋತ್ಸಾಹದ ಮೇರೆಗೆ ಕರ್ನಾಟಕ ಸಾಹಿತ್ಯ ಪರಿಷತ್ತು ಪ್ರಾರಂಭವಾಗಿ ಮುಂದೆ 1935ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಹೆಸರಿನಿಂದ ಸ್ಥಾಪನೆಯಾಯಿತು. ಇವು ಕರ್ನಾಟಕದ ಏಕೀಕರಣಕ್ಕೆ ಹೋರಾಟದ ಹುರುಪನ್ನು ನೀಡಿದವು. ಇದರಲ್ಲಿ ಅಗ್ರಗಣ್ಯವಾಗಿ ಆ ಕಾಲಘಟ್ಟದಲ್ಲಿ ಆಲೂರು ವೆಂಕಟರಾಯರು 'ಕರ್ನಾಟಕದ ಗತವೈಭವ" ಎಂಬ ಪುಸ್ತಕವನ್ನು ಬರೆದು ಅದರಲ್ಲಿ ಕರ್ನಾಟಕ ಎಂಬ ಹೆಸರು ಎಷ್ಟು ಪ್ರಾಚೀನವಾದದ್ದು ಎಂದು ತೋರಿಸಿಕೊಟ್ಟಿದ್ದರು.

ಇಂದಿಗೂ ಎಲ್ಲರೂ ನೋಡಬಹುದಾದ ಹಂಪಿಯ ಕಡಲೆಕಾಳು ಗಣೇಶನ ಗುಡಿಯ ಮುಂದೆ ಒಂದು ಶಾಸನವಿದೆ. ಅದರಲ್ಲಿ ಪ್ರೌಢ ಪ್ರತಾಪದೇವರಾಯನ ಅಮಾತ್ಯ ಲಕ್ಷ್ಮೀಧರನ ತಾಯಿ ಬಾಲಕ ಲಕ್ಷ್ಮೀಧರನಿಗೆ ಹಾಲುಣಿಸುತ್ತಾ ಹೇಳುತ್ತಾಳೆ- 'ಕೆರೆಯಂ ಕಟ್ಟಿಸು, ಬಾವಿಯಂ ಸವೆಸು, ದೇವಾಗಾರಮಂ ಮಾಡಿ ಸಜ್ಜೆರೆಯೊಳ್ ಸಿಲ್ಕಿದನಾಥರಂ ಬಿಡಿಸು..' ಎಂದು ಆ ತಾಯಿ ತನ್ನ ಎದೆಹಾಲಿನ ಜೊತೆಗೆ ಸಮಾಜಕ್ಕಾಗಿ ಬದುಕು ಎಂಬ ನೀತಿಯನ್ನೂ ಕಲಿಸಿದಳು. ತಾಯಿಯಿಂದ ಪಾಠಕಲಿತ ಲಕ್ಷ್ಮೀಧರಮಾತ್ಮ ಸಾವಿರಾರು ಕೆರೆಗಳನ್ನು ಕಟ್ಟಿಸಿದ. ಹಾವೇರಿಯಲ್ಲಿ, ಹುಬ್ಬಳ್ಳಿಯಲ್ಲಿ, ತುಮಕೂರಿನಲ್ಲಿ, ಬಳ್ಳಾರಿಯಲ್ಲಿ ಈಗಲೂ ಈ ಕೆರೆಗಳನ್ನು ನೋಡಬಹುದು.

ಈ ರೀತಿ ಪ್ರೇರಕವಾದ ನೂರಾರು ಅಂಶಗಳು ನಮ್ಮ ಕನ್ನಡ ಸಂಸ್ಕೃತಿ ಕರ್ನಾಟಕದ ಜೀವನಾಡಿಯಲ್ಲಿವೆ. ಇವುಗಳನ್ನು ಮುಂದಿನ ಪೀಳಿಗೆಗೆ ನಾವು ತಿಳಿಸಿಕೊಡಬೇಕು. ಇತಿಹಾಸವೆಂದರೆ ಕೇವಲ ಹೆಸರುಗಳನ್ನು, ಇಸವಿಗಳನ್ನು ಉರು ಹೊಡೆಸುವುದಕ್ಕೆ ಮತ್ತು ಪರಕೀಯರ, ದಾರಿಕೋರರ ಇತಿಹಾಸವನ್ನು ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ/ಭಾವಿ ಪ್ರಜೆಗಳಾಗುವವರಿಗೆ ತಲೆ ತುಂಬಿ ಇತಿಹಾಸ ತಿರುಚಬಾರದು ಅದಕ್ಕೆ ನಮ್ಮ ಶಿಕ್ಷಣ ಕ್ಷೇತ್ರವು ಸೀಮಿತವಾಗಬಾರದು.

# ನಾ ಕಂಡ ಬೇಂದ್ರೆ : ಜೀವನ ಮತ್ತು ಸಾಹಿತ್ಯ

**ಮು**ಂಬೈಯಲ್ಲಿ ಪ್ರಾಧ್ಯಕ್ಷರಾಗಿರುವ ಡಾ. ಜಿ.ವಿ.ಕುಲಕರ್ಣಿ ಅವರು ಬರೆದಂತಹ ಈ ಕೃತಿಯು, ಸುಮಾರು ಇಪ್ಪತ್ತೈದು ವರ್ಷಗಳ ಒಡನಾಟವಿದ್ದು, ಅವರು ತುಂಬಾ ಹತ್ತಿರದಿಂದ ಬಲ್ಲವರಾಗಿದ್ದು, ಕವಿ ಬೇಂದ್ರೆಯವರ ಜೀವನದ ಪ್ರಮುಖ ಘಟನೆಗಳ ಚಿತ್ರಾವಳಿಯನ್ನು ತುಂಬಾ ಚೆನ್ನಾಗಿ ಹಾಗೂ ಅದ್ಭುತವಾಗಿ ಬರೆದಿದ್ದಾರೆ.

ಮುಖ್ಯವಾಗಿ ಬೇಂದ್ರೆಯವರ ಅಧ್ಯಾಪಕ ಜೀವನ ಹಾಗೂ ನಿವೃತ್ತಿ ನಂತರದ ವೈಯಕ್ತಿಕ ಹಾಗೂ ಅವರ ಸತಿ, ಸಂಸಾರ ಜೀವನದ ಸಾರ್ವಜನಿಕರಿಗೆ ಅದೂ ದಕ್ಷಿಣ ಕರ್ನಾಟಕದವರಿಗೆ ತಿಳಿಯದ, ಪರಿಚಯವಿಲ್ಲದ ಮಾಹಿತಿಯನ್ನು ಒಪ್ಪಹೂರಣವಾಗಿ ವಿವರಿಸಿದ್ದಾರೆ.


ಕೆಲವೊಂದು ದೃಷ್ಟಾಂತಗಳ ಎಷ್ಟೊಂದು ಆಪ್ತವಾಗಿದ್ದು ಓದುಗರಿಗೆ ಮನಸ್ಸಿಗೆ ತುಂಬಾ ಹೃದಮ್ಯವಾಗಿ ಅಚ್ಚೊತ್ತಿವೆ. ಬೇಂದ್ರೆಯವರ- ಕವಿತೆ, ನಾಟಕ ಹಾಗೂ ಕಾವ್ಯಮೀಮಾಂಸೆ ಮತ್ತು ಕಾಳಿದಾಸನ ಮೇಘ ಸಂದೇಶ ಅನುವಾದ ಕೃತಿಗಳ ವಿಮರ್ಶೆಯನ್ನು ಸಹ ತುಂಬಾ ಚೆನ್ನಾಗಿ ವಿವರಿಸಿದ್ದಾರೆ. ಮುಂದುವರಿದು ಬೇಂದ್ರೆಯವರ ಜೀವನದ ಪ್ರಮುಖ ಘಟನಾವಳಿಗಳ ಜೊತೆಗೆ ಅವರು ಪಡೆದಂತಹ ಬಿರುದು ಸನ್ಮಾನಗಳ ಬಗ್ಗೆ ವಿವರಿಸಿದ್ದು, ನಿವೃತ್ತಿ ನಂತರ ಪೆನ್ಷನ್ ಇಲ್ಲದಿದ್ದಾಗ ಸಂಸಾರ ಖರ್ಚುವೆಚ್ಚಕ್ಕೆ ಗೊಕಾಕರ ಮುಖಾಂತರ ಬಂದಂತಹ ಧಾರವಾಡ AIR ಹುದ್ದೆ ಒಲಿದ ಬಂದ ಸಂದರ್ಭ ತುಂಬಾ ಕುತೂಹಲಭರಿತವಾಗಿ ಮೂಡಿ ಬಂದಿರುತ್ತದೆ.

ಅವರು ಬರೆದ ಎರಡು ಕವನಗಳು ಹೇಗೆ ಕನ್ನಡದ ಸಂಸ್ಕೃತ ಲೋಕದಲ್ಲಿ ಹಾಗೂ ಭಾವಗೀತೆಗಳ ಇತಿಹಾಸದಲ್ಲಿ ಮೈಲುಗಲ್ಲಾಗಿ ಅಜರಾಮರವಾಗಿರುವುದನ್ನು ಪ್ರತಿ ಪದದ ಅರ್ಥ ವಿವರಣೆದೊಂದಿಗೆ ವಿವರಿಸಿದ್ದಾರೆ. ಅದಾವುವೆಂದರೆ 'ಇಳಿದು ಬಾ ತಾಯಿ ಇಳಿದು ತಾಯಿ' ಮತ್ತು 'ಬಾರೊ ಸಾಧನ ಕೇರಿಗೆ'.

ಈ ಕೃತಿಯು ಕಾವ್ಯ ಹವ್ಯಾಸಿಗಳಿಗೆ ಸಂಗ್ರಹ ಯೋಗ್ಯವಾದ ಪುಸ್ತಕ ಹಾಗೂ ಕಾವ್ಯದ ಅಂತರ್ಯದೊಳಗೆ ಹೊಕ್ಕು, ನೋಡದೆ ಹೋದರೆ ಕೆಲವೊಂದು ಕಾವ್ಯಗಳು ಅರ್ಥವಾಗುವುದಿಲ್ಲ, ಅದಕ್ಕೆ ಇಲ್ಲಿ ಅರ್ಥ ವಿಶ್ಲೇಷಣೆಯನ್ನು ತುಂಬಾ ಚೆನ್ನಾಗಿ ಮೂಡಿಸಿದ್ದಾರೆ.

ಈ ಪುಸ್ತಕದ ನಡುವಿನ ಮೂಲ ಅಧ್ಯಾಯಗಳಲ್ಲಿ ಲೇಖಕರು ಬೇಂದ್ರೆ. ಶತಮಾನೋತ್ಸವ ಸಂದರ್ಭದಲ್ಲಿ ಬರೆದು ಪತ್ರಿಕೆಯಲ್ಲಿ ಪ್ರಕಟಿಸಿದ ಲೇಖನಗಳನ್ನು ಒಳಗೊಂಡಿದ್ದರೆ, ಮೊದಲ ಹಾಗೂ ಕೊನೆಯ ಅಧ್ಯಾಯಗಳನ್ನು ಅತ್ಯಂತ ಸೊಗಸಾಗಿ ಬರೆದಿದ್ದಾರೆ.

ಬೇಂದ್ರೆಯವರ 31 ಕಾವ್ಯ ಸಂಗ್ರಹ, ಹದಿನಾಲ್ಕು ನಾಟಕ ನಿರಾಭರಣ ಸುಂದರಿಯಂತ ಕತೆ ಹಾಗೂ ಹರಟೆ ಸಂಗ್ರಹ, ಸಾಹಿತ್ಯ ಮತ್ತು ವಿಮರ್ಶೆ ಮೊದಲಾದ ಹನ್ನೊಂದು ವಿಮರ್ಶ ಗ್ರಂಥ, ಏಳು ಅನುವಾದ ಗ್ರಂಥಗಳನ್ನು ರಚಿಸಿದ್ದಾರೆ, ಮರಾಠಿಯಲ್ಲಿ 'ಸಂವಾದ' ಮುಂತಾದ ನಾಲ್ಕು ಗ್ರಂಥಗಳಿವೆ. ಅವರಿಗೆ ದೊರೆತ ಗೌರವಗಳು ಅನೇಕನೇಕ ಆದರೆ ಅದರಲ್ಲಿ ಕೇಂದ್ರ





ಸಾಹಿತ್ಯ ಅಕಾಡೆಮಿಯಿಂದ ಫೆಲೊಶಿಫ್ 1969ರಲ್ಲಿ ಉಡುಪಿಯ ಅದಮೂರು ಮಠದಿಂದ 'ಕರ್ನಾಟಕ-ಕವಿ-ಕುಲ-ಗುರು' ಬಿರುದು(1972), ವಾರಣಾಸಿಯ ಕಾಶಿ ವಿದ್ಯಾಪೀಠದಿಂದ ಡಾಕ್ಟರೇಟ್ ಪದವಿ, ಅಲ್ಲದೆ ಮೈಸೂರ್ ಹಾಗೂ ಕರ್ನಾಟಕ ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್ ಇವರಿಗೆ ಸಂದ ಗೌರವಗಳ ಸಂದರ್ಭಗಳನ್ನು ವಿವರಿಸಿದ್ದಾರೆ.


ಒಟ್ಟಾರೆ 155 ಪುಟಗಳಲ್ಲಿ ಐದು ಅಧ್ಯಾಯಗಳ 'ಬೇಂದ್ರೆ'ಯವರ ಸಾರ್ಥಕ ಜೀವನ ಹಾಗೂ ಕನ್ನಡ ಸಾಹಿತ್ಯಕ್ಕೆ ಅಪಾರ ಸೇವೆಯನ್ನು ಭಾವ ತುಂಬಿದ ಅಂತಃಕರಣದಿಂದ ಗುರುವಿಗೆ ಸಲ್ಲಿಸಿದ ಗುರು ಕಾಣಿಕೆಯಂತೆ ಸಮರ್ಪಿಸಿದ್ದಾರೆ. ಈ ಪುಸ್ತಕದಲ್ಲಿ ರೇಖಾ ಚಿತ್ರ, ತೈಲವರ್ಣ ಚಿತ್ರದೊಂದಿಗೆ, ಬೇಂದ್ರೆಯವರ ಜೀವನದ ಫೋಟೋ ಪ್ಯೂಚರ್‌ನ್ನು ಹಾಗೂ ಅವರ ಎರಡು ಪ್ರಮುಖ ಭಾಷಣದ ವಿವರಗಳನ್ನು ಒಳಗೊಂಡಿರುತ್ತದೆ.

ಈ ಪುಸ್ತಕವು ಕೇವಲ ಸಂಗ್ರಹ ಯೋಗ್ಯಕ್ಕೆ ಮಾತ್ರವಲ್ಲದೆ, ಬೇಂದ್ರೆಯವರ ಜೀವನದ ಘಟನೆಗಳ ಬಗ್ಗೆ ಅವರ ಕೃತಿ ಕಾವ್ಯಗಳ ಬಗ್ಗೆ ಮಾರ್ಗದರ್ಶಕ ನೀಡುವಂತಹ ಆಕರ ಗ್ರಂಥವಾಗಿ ಸಹಾಯವಾಗಿರುತ್ತದೆ.

**-ಡಾ. 'ಜೀವಿ' ಕುಲಕರ್ಣಿ**

# ಕನ್ನಡದ ಜ್ಞಾನಪೀಠ ಪುರಸ್ಕೃತರು–ಸಾಹಿತ್ಯದ ಅಮರ ನಕ್ಷತ್ರಗಳು

















ಭಾರತದ ಅತ್ಯುನ್ನತ ಸಾಹಿತ್ಯ ಗೌರವವಾದ ಜ್ಞಾನಪೀಠ ಪ್ರಶಸ್ತಿ, ಕನ್ನಡ ಭಾಷೆಗೆ ಅಪಾರ ಕೀರ್ತಿಯನ್ನು ತಂದಿದೆ. ರಾಷ್ಟ್ರ ಮಟ್ಟದ ಈ ಪ್ರಶಸ್ತಿಯನ್ನು ಪಡೆದಿರುವ ಕನ್ನಡ ಸಾಹಿತ್ಯದ ಮಹನೀಯರು ತಮ್ಮ ಕಾವ್ಯ, ಕಾದಂಬರಿ, ನಾಟಕ ಮತ್ತು ಚಿಂತನೆಗಳ ಮೂಲಕ ಭಾರತೀಯ ಸಾಹಿತ್ಯದ ಪಾರಿಜಾತವನ್ನು ಅರಳಿಸಿದ್ದಾರೆ.

**1. ಕುವೆಂಪು (Kuppali Venkatappa Puttappa) – 1967**

ಮೊದಲ ಕನ್ನಡ ಜ್ಞಾನಪೀಠ ವಿಜೇತ ಕವಿ ಕುವೆಂಪು, ಶ್ರೀರಾಮಾಯಣ ದರ್ಶನಂ ಮೂಲಕ ಕಾವ್ಯಕ್ಕೆ ವಿಸ್ಮಯದ ಆಯಾಮ ನೀಡಿದರು. 'ವಿಶ್ವಮಾನವತೆಯ' ತತ್ವವು ಅವರ ಬರಹಗಳಲ್ಲಿ ಜೀವಂತವಾಗಿದೆ.

**2. ದ.ರಾ. ಬೇಂದ್ರೆ (Dattatreya Ramachandra Bendre) – 1974**

'ಅಂಬಿಕಾತನಯದತ್ತ', 'ಗಂಗಾವತರಣ', 'ನಾಕು ತಂತಿ' ಕೃತಿಗಳ ಮೂಲಕ ಬೇಂದ್ರೆ ಕಾವ್ಯ ಲೋಕದಲ್ಲಿ ಸೂರ್ಯರಶ್ಮಿಯಂತೆ ಪ್ರಕಾಶಮಾನರಾದರು. ಜನಭಾವನೆಗಳನ್ನು ಲಾಲಿತ್ಯದಿಂದ ಚಿತ್ರಿಸಿದ ಮಹಾಕವಿ.

**3. ಮಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ – 1983**

ಕಥೆಗಾರನಾದ ಮಾಸ್ತಿ, ಚಿಕ್ಕವೀರರಾಜೇಂದ್ರ ಕಾದಂಬರಿಯಿಂದ ಕನ್ನಡ ಕಾದಂಬರಿಯ ಹೊಸ ದಿಕ್ಕು ತೋರಿಸಿದರು. ಸರಳ ಶೈಲಿ ಮತ್ತು ಮಾನವೀಯ ಭಾವನೆಗಳ ಚಿತ್ರಣ ಅವರ ಬಲ.

**4. ವಿ.ಕೆ. ಗೋಕಕ್ (Vinayaka Krishna Gokak) – 1990**

ಕವಿ, ವಿಮರ್ಶಕ ಹಾಗೂ ಶಿಕ್ಷಣತಜ್ಞನಾದ ಗೋಕಕ್ ಅವರ ಭಾರತ ಸಂಗ್ರಾಮ ಮತ್ತು ಸಾವಿತ್ರಿ ಕೃತಿಗಳು ರಾಷ್ಟ್ರೀಯತೆಯ ಹೃದಯವನ್ನು ತಟ್ಟಿದವು. ಅವರ ಸಾಹಿತ್ಯಕ್ಕೆ ತತ್ತ್ವಚಿಂತನೆಯ ನೈಜ ಬಿಂಬವಿತ್ತು.

**5. ಯು.ಆರ್. ಅನಂತಮೂರ್ತಿ – 1994**

ನವ್ಯ ಚಳುವಳಿಯ ಪ್ರಮುಖ ಕಾದಂಬರಿಕಾರರು. ಸಂಸ್ಕಾರ, ಭಾರತಿ ಪೂಜೆಯ ನಂತರ, ಭಾರತಿಪುರ ಕೃತಿಗಳ ಮೂಲಕ ಅವರು ಸಾಮಾಜಿಕ ಕ್ರಾಂತಿಯ ಧ್ವನಿಯಾದರು.

**6. ಗಿರೀಶ್ ಕಾರ್ನಾಡ್ – 1998**

ನಾಟಕ ಕ್ಷೇತ್ರದ ಪ್ರತಿಭಾವಂತ ಲೇಖಕನಾದ ಕಾರ್ನಾಡ್, ತುಗಲಕ್, ಹಯವದನ, ನಾಗಮಂಡಲ ಮೂಲಕ ಭಾರತದ ನಾಟಕ ಲೋಕವನ್ನು ಸಮೃದ್ಧಗೊಳಿಸಿದರು. ಅವರ ಕೃತಿಗಳು ಪೌರಾಣಿಕತೆ ಮತ್ತು ಆಧುನಿಕತೆಯ ಸೇತುವೆಯಾಗಿವೆ.

**7. ಚಂದ್ರಶೇಖರ ಕಂಬಾರ – 2010**

ಜನಪದ, ಕಾವ್ಯ ಮತ್ತು ನಾಟಕಗಳ ಲೋಕದಲ್ಲಿ ವಿಶಿಷ್ಟ ಗುರುತಿನ ಲೇಖಕ. ಜೋಕುಮಾರಸ್ವಾಮಿ, ಸಿಂಹಾಸನ, ಕದಸಿಗೇ ಹೊಯ್ದು ಅವರ ಪ್ರಸಿದ್ಧ ಕೃತಿಗಳು. ಕಂಬಾರರ ಕಾವ್ಯ ಜನಜೀವನದ ನಾಡಿ ಸ್ಪಂದಿಸುವ ಶಬ್ದ.

ಒಟ್ಟು 7 ಮಂದಿ ಕನ್ನಡ ಸಾಹಿತ್ಯದ ಮಹನೀಯರು ಈ ಅಪಾರ ಗೌರವವನ್ನು ಪಡೆದಿದ್ದಾರೆ. ಇವರ ಸಾಹಿತ್ಯ ಕನ್ನಡ ಸಂಸ್ಕೃತಿಯ ಶಾಶ್ವತ ಬೆಳಕಾಗಿ ಮುಂದುವರಿದಿದೆ.

**ಮಧ್ಯಪ್ರದೇಶ ಸರ್ಕಾರ ಕೊಡಮಾಡುವ ಸರಸ್ವತಿ ಸಮ್ಮಾನ ಪಡೆದ ಕನ್ನಡ ಮೇರು ಕೃತಿಗಳು**



**1. ಡಾ. ಎಸ್.ಎಲ್. ಭೈರಪ್ಪ – 'ಮಂದ್ರ' (2010)**

2010ರಲ್ಲಿ ಪ್ರಸಿದ್ಧ ಕಾದಂಬರಿಕಾರ ಡಾ. ಎಸ್.ಎಲ್.ಭೈರಪ್ಪರಿಗೆ ಅವರ ಮಹಾಕಾದಂಬರಿ "ಮಂದ್ರ"ಗೆ ಸಾರಸ್ವತಿ ಸಮ್ಮಾನ್ ಪ್ರಶಸ್ತಿ ಲಭಿಸಿತು.

ಈ ಕೃತಿಯಲ್ಲಿ ಸಂಗೀತ, ಮಾನವ ಸಂಬಂಧ, ಆಧ್ಯಾತ್ಮ ಮತ್ತು ನೈತಿಕ ಸಂಘರ್ಷಗಳ ಆಳವಾದ ಚಿತ್ರಣ ಇದೆ. ಭಾರತೀಯ ಸಂಸ್ಕೃತಿಯ ನಾದಮಯ ಆಳವನ್ನು ತೋರಿಸುವ ಈ ಕಾದಂಬರಿ ಭೈರಪ್ಪರ ಅತ್ಯುತ್ತಮ ಕೃತಿಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ.

**2. ಡಾ. ಎಂ. ವೀರಪ್ಪ ಮೊಯ್ಲಿ – "ಶ್ರೀರಾಮಾಯಣ ಮಹಾವೇಕ್ಷಣಂ" (2014)**

2014ರಲ್ಲಿ ಡಾ. ಎಂ.ವೀರಪ್ಪ ಮೊಯ್ಲಿ ಅವರಿಗೆ ಅವರ ಭವ್ಯ ಕಾವ್ಯಕೃತಿ "ಶ್ರೀರಾಮಾಯಣ ಮಹಾವೇಕ್ಷಣಂ"ಗಾಗಿ ಸಾರಸ್ವತಿ ಸಮ್ಮಾನ್ ಪ್ರಶಸ್ತಿ ಲಭಿಸಿತು. ಇದು 43,000ಕ್ಕಿಂತ ಹೆಚ್ಚು ಶ್ಲೋಕಗಳನ್ನು ಒಳಗೊಂಡ ಆಧುನಿಕ ರಾಮಾಯಣದ ದೃಷ್ಟಿಕೋನದ ಮಹಾಕಾವ್ಯವಾಗಿದೆ. ಧಾರ್ಮಿಕ, ನೈತಿಕ ಹಾಗೂ ಸಾಮಾಜಿಕ ಅರ್ಥಗಳಲ್ಲಿ ರಾಮಾಯಣದ ಪುನರ್ವಿಚಾರವನ್ನು ಈ ಕೃತಿ ಮಾಡುತ್ತದೆ.

# ಸಾವಿರ ವರ್ಷಗಳ ಕನ್ನಡ ಸಾಹಿತ್ಯ

**ಕ**ನ್ನಡ ಭಾಷೆಯು ಭಾರತದ ಅತ್ಯಂತ ಪುರಾತನ ಕಾಲದ ಪೌರಾಣಿಕ ಮತ್ತು ಸಾಂಸ್ಕೃತಿಕ ಶ್ರೀಮಂತ ಭಾಷೆಗಳಲ್ಲೊಂದು. ಕಳೆದ ಸಾವಿರ ವರ್ಷಗಳ ಅವಧಿಯಲ್ಲಿ ಕನ್ನಡ ಸಾಹಿತ್ಯವು ಭಕ್ತಿ, ಶೌರ್ಯ, ಸಾಮಾಜಿಕ ಜಾಗೃತಿ ಮತ್ತು ಮಾನವೀಯ ಚಿಂತನೆಗಳ ವಿಭಿನ್ನ ಹಾದಿಗಳಲ್ಲಿ ಬೆಳೆದಿದೆ. ಇನ್ನೂ ಬೆಳೆಯುತ್ತಿದೆ.

**ಪ್ರಾಚೀನ ಯುಗ (ಕ್ರಿ.ಶ. 850–1200)**

ರಾಷ್ಟ್ರಕೂಟರು ಮತ್ತು ಪಶ್ಚಿಮ ಚಾಲುಕ್ಯರ ಕಾಲದಲ್ಲಿ ಕನ್ನಡ ಕಾವ್ಯ ಚುರುಕುಗೊಂಡಿತು. ಆದಿಕವಿ ಪಂಪ, ಶ್ರೀ ಪೊನ್ನ ಮತ್ತು ರನ್ನ– "ಕನ್ನಡದ ತ್ರಿರತ್ನಗಳು" ಎಂದೆನಿಸಿಕೊಂಡವರು. ಪ್ರಾರಂಭದ ಹಳೆಗನ್ನಡದ ಕನ್ನಡ ಸಾಹಿತ್ಯ ಸಮೃದ್ಧಿಗೊಳಿಸಿದರು. ಪಂಪನ ವಿಕ್ರಮಾರ್ಜುನ ವಿಜಯ, ಪೊನ್ನನ ಶಾಂತಿಪುರಾಣ, ರನ್ನನ ಸಾಹಸಭೀಮ ವಿಜಯ ಈ ಕೃತಿಗಳು ಕನ್ನಡ ಭಾಷೆಯ ಪೌರಾಣಿಕ ಕಾವ್ಯದ ಮೂಲಸ್ತಂಭಗಳಾದವು.

**ವಚನ ಸಾಹಿತ್ಯದ ಯುಗ (12ನೇ ಶತಮಾನ)**

ನಂತರ 12ನೇ ಶತಮಾನಕ್ಕೆ ವಚನ ಕ್ರಾಂತಿಯಿಂದ ಸಾಮಾಜಿಕ ಕ್ರಾಂತಿಯ ಹರಿಕಾರರಾದ ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ಚನ್ನಬಸವಣ್ಣ ಮುಂತಾದ ಶರಣರು ಜನಸಾಮಾನ್ಯರ ಭಾಷೆಯಲ್ಲಿ ಬರೆದ ವಚನಗಳು ಸಾಮಾಜಿಕ ಕ್ರಾಂತಿಯ ಬೀಜ ಬಿತ್ತಿದವು. ಇವು ವರ್ಣಭೇದ, ಮಹಿಳಾ ಅಸಮಾನತೆ, ಮಠಾಧಿಪತ್ಯಗಳಿಗೆ ಪ್ರಶ್ನೆ ಎತ್ತಿದವು. ಮತ್ತು ಅಂದಿನ ಕಾಲಕ್ಕೆ ಮೂಢ ಆಚರಣೆಗಳ ವಿರುದ್ಧ ಸೆಟೆದು ನಿಂತು ಸಮಾಜ ಸುಧಾರಣೆಗಳಿಗಾಗಿ ಪ್ರಯತ್ನ ನಡೆದವು.

**ಭಕ್ತಿ ಮತ್ತು ಪೌರಾಣಿಕ ಯುಗ (1200–1900)**


ಹರಿಹರ, ರಘವಾಂಕ, ಕುಮಾರವ್ಯಾಸ, ಚಾಮರಸ ಮುಂತಾದವರು ಭಕ್ತಿ ಮತ್ತು ನೀತಿ ಕಥೆಗಳಿಗೆ ಜೀವ ತುಂಬಿದರು. ಕುಮಾರವ್ಯಾಸನ "ಕರ್ನಾಟಕ ಭಾರತ ಕಥಾಮಂಜರಿ" ಮಹಾಭಾರತದ ನವ್ಯ ರೂಪ. ಚಾಮರಸನ "ಪ್ರಭುಲಿಂಗಲೀಲೆ" ವೀರಶೈವ ದರ್ಶನದ ಕಾವ್ಯರೂಪ. ಹಾಗೂ ಕೃಷ್ಣದೇವರಾಯನ ಕಾಲದಲ್ಲಿ ಸಾಹಿತ್ಯ ಪರಾಕಾಷ್ಠ ಹೊಂದಿ ಆಳ ಅರಸರೆ ಕೃತಿ ರಚಿಸುವಂತೆ ಪ್ರೇರೇಪಿತರಾದರು.

**ನವೋದಯ ಯುಗ (1925–1970)**

ನಂತರ ಬ್ರಿಟಿಷರ ಪ್ರಭಾವದಿಂದ ಸಾಹಿತ್ಯದಲ್ಲಿ ನವ ಚಿಂತನೆಗಳು ಮೂಡಿದವು. ಬಿ.ಎಂ. ಶ್ರೀ, ಕು.ವೆಂಪು, ಡಿ.ಆರ್. ಬೇಂದ್ರೆ, ಮಸ್ತಿ ವೆಂಕಟೇಶ ಅಯ್ಯಂಗಾರ್, ಶಿವರಾಮ ಕಾರಂತ ಮುಂತಾದವರು ಸಾಹಿತ್ಯದ ನವೋದಯದ ಶಿಖರದತ್ತ ಕನ್ನಡವನ್ನು ಕೊಂಡೊಯ್ದರು. ಕು.ವೆಂಪು ಅವರ ಶ್ರೀರಾಮಾಯಣ ದರ್ಶನಂ ಕೃತಿಗೆ ರಾಷ್ಟ್ರದ ಜ್ಞಾನಪೀಠ ಪುರಸ್ಕಾರ ದೊರಕಿತು.

**ಆಧುನಿಕ ಮತ್ತು ಸಮಕಾಲೀನ ಯುಗ (1970–ಇಂದಿನವರೆಗೂ)**

ಸಾಹಿತ್ಯದಲ್ಲಿ ಸಾಮಾಜಿಕ ಯಥಾರ್ಥ, ದಲಿತ ಚಳುವಳಿ, ಸ್ತ್ರೀ ಚಿಂತನೆ ಮತ್ತು ಪರಿಸರದ ಮಾತುಗಳು ಗಂಭೀರವಾಗಿ ಮೂಡಿಬಂದವು. ಯು.ಆರ್. ಅನಂತಮೂರ್ತಿ (ಸಂಸ್ಕಾರ), ಗಿರೀಶ ಕಾರ್ನಾಡ (ತುಘಲಕ್, ಹಯವಾದನ), ಪೂರ್ಣಚಂದ್ರ ತೇಜಸ್ವಿ (ಕಾರ್ವಾಲೋ), ಚಂದ್ರಶೇಖರ ಕಂಬಾರ (ಸಿರಿ ಸಂಪಿಗೆ, ಜೋಕುಮಾರಸ್ವಾಮಿ) ಇವರು ನವ ಕನ್ನಡದ ಆಳವಾದ ಚಿಂತನೆಗೆ ಬಲ ನೀಡಿದರು.




**ಜ್ಞಾನಪೀಠ ಪುರಸ್ಕೃತ ಕನ್ನಡ ಸಾಹಿತ್ಯದ ದಿಗ್ಗಜರು**

1. ಕು.ವೆಂಪು (1967)
2. ಡಿ.ಆರ್. ಬೇಂದ್ರೆ (1973)
3. ಮಸ್ತಿ ವೆಂಕಟೇಶ ಅಯ್ಯಂಗಾರ್ (1983)
4. ಶಿವರಾಮ ಕಾರಂತ (1998)
5. ಯು.ಆರ್. ಅನಂತಮೂರ್ತಿ (1994)
6. ಗಿರೀಶ ಕಾರ್ನಾಡ (1998)
7. ಚಂದ್ರಶೇಖರ ಕಂಬಾರ (2010)

**ಸಾರಾಂಶ**

ಪಂಪನಿಂದ ಕಂಬಾರರವರೆಗೆ–ಕನ್ನಡ ಸಾಹಿತ್ಯವು ಸಾವಿರ ವರ್ಷಗಳ ಸಾಂಸ್ಕೃತಿಕ ಮತ್ತು ಮಾನವೀಯ ಪಯಣ. ಭಕ್ತಿ, ಶೌರ್ಯ, ಕ್ರಾಂತಿ, ಕಾವ್ಯ ಮತ್ತು ಚಿಂತನೆಯ ಈ ಹಾದಿಯು ಇಂದಿಗೂ ಜೀವಂತವಾಗಿದೆ. ಕನ್ನಡದ ಸಾಹಿತ್ಯ ಪರಂಪರೆ ಎಂದಿಗೂ ನಿಷ್ಪಭವಾಗದ ದೀಪದಂತೆ ಜನಮನಗಳನ್ನು ಬೆಳಗಿಸುತ್ತಿದೆ.


# ಸ್ವಾತಂತ್ರ್ಯ ನಂತರದ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು

ಬ್ರಿಟಿಷ್ ಆಳ್ವಿಕೆ ಕೊನೆಗೊಂಡು 15.08.1947 ರಂದು ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಆಡಳಿತ ಚುಕ್ಕಾಣಿ ಪ್ರಜಾಪ್ರತಿನಿಧಿಗಳಿಗೆ ಹಸ್ತಾಂತರವಾಗಿ ರಾಜ್ಯದ ಆಡಳಿತ ಯಂತ್ರಾಂಗದ ಮುಖ್ಯಸ್ಥರಾಗಿ ಸಾರ್ವತ್ರಿಕ ಚುನಾವಣೆಯಲ್ಲಿ ಜನರಿಂದ ಆಯ್ಕೆಗೊಂಡ ಮುಖ್ಯಮಂತ್ರಿಗಳ ವಿವರ ಈ ಕೆಳಗಿನಂತಿದೆ:



1. ಕೆ.ಚಂಗಲರಾಯ ರೆಡ್ಡಿ (1947–1952)
2. ಕೆ.ಹನುಮಂತಯ್ಯ (1952–1956)
3. ಕದಿದಾಳ ಮಂಜಪ್ಪ (1956)
4. ಎಸ್.ನಿಜಲಿಂಗಪ್ಪ (1956–1958, 1962–1968)
5. ಬಿ.ಡಿ.ಜಟ್ಟಿ (1958–1962)
6. ವೀರೇಂದ್ರ ಪಾಟೀಲ್ (1968–1971, 1989–1990)
7. ಡಿ.ದೇವರಾಜ ಅರಸು (1972–1977, 1978–1980)
8. ಆರ್.ಗುಂಡೂರಾವ್ (1980–1983)
9. ರಾಮಕೃಷ್ಣ ಹೆಗ್ಡೆ (1983–1988)
10. ಎಸ್.ಆರ್.ಬೊಮ್ಮಾಯಿ (1988–1989)
11. ಎಸ್.ಬಂಗಾರಪ್ಪ (1990–1992)
12. ಎಂ.ವೀರಪ್ಪ ಮೊಯ್ಲಿ (1992–1994)
13. ಎಚ್.ಡಿ.ದೇವೇಗೌಡ (1994–1996)
14. ಜೆ.ಎಚ್.ಪಟೇಲ್ (1996–1999)
15. ಎಸ್.ಎಂ.ಕೃಷ್ಣ (1999–2004)
16. ಎನ್.ಧರ್ಮಸಿಂಗ್ (2004–2006)
17. ಎಚ್.ಡಿ.ಕುಮಾರಸ್ವಾಮಿ (2006–2007, 2018–2019)
18. ಬಿ.ಎಸ್.ಯಡಿಯೂರಪ್ಪ (2007, 2008–2011, 2019–2021)
19. ಡಿ.ವಿ.ಸದಾನಂದ ಗೌಡ (2011–2012)
20. ಜಗದೀಶ ಶೆಟ್ಟರ್ (2012–2013)
21. ಸಿದ್ದರಾಮಯ್ಯ (2013–2018, 2023–ಇಂದಿಗೂ 2025ರವರೆಗೆ)
22. ಬಸವರಾಜ ಬೊಮ್ಮಾಯಿ (2021–2023)
23. ಪ್ರಸ್ತುತ ಮುಖ್ಯಮಂತ್ರಿ (2025): ಸಿದ್ದರಾಮಯ್ಯ

# ಮೇಕೆದಾಟು ಯೋಜನೆ: ತಮಿಳುನಾಡು ಅರ್ಜಿ ವಜಾ




**ಬೆಂ**ಗಳೂರು: ಮೇಕೆದಾಟು ಯೋಜನೆಯನ್ನು ಪ್ರಶ್ನಿಸಿ ತಮಿಳುನಾಡು ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ಗುರುವಾರ ವಜಾಗೊಳಿಸಿದೆ.

ಮೇಕೆದಾಟು ಯೋಜನೆಯ ಸಮತೋಲನ ಜಲಾಶಯ ನಿರ್ಮಾಣಕ್ಕೆ ಮುಂದಾಗಿರುವ ಕರ್ನಾಟಕ ಸರ್ಕಾರದ ಕ್ರಮ ಪ್ರಶ್ನಿಸಿ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಈ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿರವರ ನ್ಯಾಯಪೀಠ ತಮಿಳುನಾಡಿನ ಅರ್ಜಿಯನ್ನು ವಜಾ ಮಾಡಿದೆ.

ಮೇಕೆದಾಟು ಯೋಜನೆ ಇನ್ನು ಆರಂಭಿಕ ಹಂತದಲ್ಲಿದೆ. ಜತೆಗೆ ಈ ಯೋಜನೆಯು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಹಾಗೂ ಕೇಂದ್ರ ಜಲ ಆಯೋಗದಂತಹ ತಜ್ಞ ಸಂಸ್ಥೆಗಳ ಪರಿಶೀಲನೆಯಲ್ಲಿದೆ. ಇನ್ನು ಯಾವುದೇ ನಿರ್ವಹಣಾ ಕಾರ್ಯ ಆರಂಭವಾಗಿಲ್ಲ. ಹೀಗಾಗಿ ಮಧ್ಯ ಪ್ರವೇಶ ಮಾಡಲ್ಲ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ಹೇಳಿ, ತಮಿಳುನಾಡಿನ ಅರ್ಜಿಯನ್ನು ವಜಾ ಮಾಡಿದ್ದಾರೆ.

ಕರ್ನಾಟಕದ ಮೇಕೆಡಾಟು ಜಲಾಶಯ ಯೋಜನೆಗೆ ತಮಿಳುನಾಡು ನೀಡಿದ ವಿರೋಧವನ್ನು ಸುಪ್ರೀಂಕೋರ್ಟ್ ನಿರಾಕರಿಸಿದೆ. ಯೋಜನೆಯ ವಿವರಣಾತ್ಮಕ ವರದಿ ತಯಾರಿಕೆಗೆ ನೀಡಲಾದ ಅನುಮತಿಯ ವಿರುದ್ಧ ತಮಿಳುನಾಡು ದಾಖಲಿಸಿದ್ದ ಅರ್ಜಿಯು 'ಅಕಾಲಿಕ' ಎಂದು ಸುಪ್ರೀಂಕೋರ್ಟ್ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ, ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಮತ್ತು ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಅವರನ್ನು ಒಳಗೊಂಡ ತ್ರಿಸದಸ್ಯ ಪೀಠ ನೀಡಿದೆ. ತಮಿಳುನಾಡಿನ ಆಕ್ಷೇಪಗಳು ಮತ್ತು ಕಾವೇರಿ ನೀರು ನಿರ್ವಹಣಾ ಅಧಿಕಾರ ಮತ್ತು ಕಾವೇರಿ ನೀರು ನಿಯಂತ್ರಣ ಸಮಿತಿ ಸಲಹೆಗಳನ್ನು ಪರಿಗಣಿಸಿ ತಯಾರಿಕೆಗೆ ಕೇಂದ್ರ ಜಲ ಆಯೋಗ ಅನುಮತಿ ನೀಡಿದೆ ಎಂದು ಕೋರ್ಟ್ ಗಮನಿಸಿದ್ದೇವೆ. ಯೋಜನೆಗೆ ಅಂತಿಮ ಅನುಮತಿ ನೀಡುವಾಗ ಜಲ ಆಯೋಗ ಮತ್ತು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ(CWRC)ಗಳ ಅನುಮತಿ ಅಗತ್ಯವಿರುತ್ತದೆ ಎಂದೂ ಸಿಡಬ್ಲೂಸಿ ಸ್ಪಷ್ಟಪಡಿಸಿದೆ. ಆದ್ದರಿಂದ ಈ ಹಂತದಲ್ಲಿ ತಮಿಳುನಾಡಿನ ಅರ್ಜಿ ಅಕಾಲಿಕ ಎಂದು ಪೀಠವು ಅಭಿಪ್ರಾಯಪಟ್ಟಿದೆ.

ಸಿಡಬ್ಲೂಸಿ ಯೋಜನೆಯ ಡಿಪಿಆರ್ ಅನ್ನು ಅಂತಿಮವಾಗಿ ಅನುಮೋದಿಸಿದರೆ, ಅದನ್ನು ಪ್ರಶ್ನೆ ಮಾಡಲು ತಮಿಳುನಾಡು ಸ್ವತಂತ್ರವಾಗಿರುತ್ತದೆ ಎಂದು ನ್ಯಾಯಾಲಯವು ಸ್ಪಷ್ಟಪಡಿಸಿದೆ.

ತಮಿಳುನಾಡಿನ ಪರ ವಕೀಲ ಮುಕುಲ್ ರೋಹತ್ಗಿ, ಮೇಕೆದಾಟು ಯೋಜನೆಯಿಂದ ಕಾವೇರಿಯನ್ನು ಅವಲಂಬಿಸಿರುವ ತಮಿಳುನಾಡಿನ ರೈತರಿಗೆ ಹಾನಿ ಉಂಟಾಗಬಹುದು ಎಂದು ವಾದಿಸಿದ್ದರು. ಬಿಳಿಗುಂಡ್ಲು ಅಳತೆ ಕೇಂದ್ರಕ್ಕಿಂತ ಮೇಲಿನ ಪ್ರದೇಶದಲ್ಲಿ ಜಲಾಶಯ ನಿರ್ಮಾಣವಾದರೆ, ತಮಿಳುನಾಡಿಗೆ ನೀರು ಬಿಡುಗಡೆ ಮಾಡುವುದು ಪ್ರತಿಕೂಲವಾಗುತ್ತದೆ ಎಂದು ಅವರು ತಿಳಿಸಿದ್ದರು.

ಕರ್ನಾಟಕದ ಪರ ವಕೀಲ ಶ್ಯಾಮ್ ದಿವಾನ್, ತಮಿಳುನಾಡಿನ ಅರ್ಜಿ "ತಪ್ಪು ತಿಳುವಳಿಕೆಯ ಅರ್ಜಿ" ಎಂದು ವಾದಿಸಿದ್ದರು. ಸುಪ್ರೀಂಕೋರ್ಟ್ ಆದೇಶದ ಪ್ರಕಾರ ತಮಿಳುನಾಡಿಗೆ 177.25 TMC ನೀರು ಬಿಡುಗಡೆ ಮಾಡುವ ಕರ್ನಾಟಕದ ಕರ್ತವ್ಯ ನಿರ್ವಹಣೆಯಾಗದಿದ್ದರೆ, ಅಗತ್ಯ ಅನುಮತಿ ಪಡೆದ ನಂತರ ಜಲಾಶಯ ಯೋಜನೆ ಮುಂದುವರೆಸಲು ಅವಕಾಶ ಇರಬೇಕು ಎಂದು ವಾದಿಸಿದ್ದರು.

ಕಾವೇರಿ ನೀರು ಹಂಚಿಕೆ ತೀರ್ಪು ವಿರುದ್ಧ ತಮಿಳುನಾಡು 2007 ರಲ್ಲಿ ದಾಖಲಿಸಿದ್ದ ಮೇಲ್ಮನವಿಯಲ್ಲಿ ಈ ಅರ್ಜಿಯನ್ನು 'ವಿವಿಧ ಅರ್ಜಿ' ಆಗಿ ದಾಖಲಿಸಲಾಗಿತ್ತು. 2018 ರಲ್ಲಿ ಕಾವೇರಿ ನೀರು ನಿರ್ವಹಣಾ ಯೋಜನೆಯಡಿಯಲ್ಲಿ ಸಿಡಬ್ಲೂಎಂಎ ಮತ್ತು ಸಿಡಬ್ಲೂಆರ್ ಅನ್ನು ರಚಿಸಲಾಗಿದೆ.

ಮೇಕೆದಾಟು ಯೋಜನೆಗೆ ಸಂಬಂಧಿಸಿದ ಸುಪ್ರೀಂಕೋರ್ಟ್‌ನ ತೀರ್ಪು ಕರ್ನಾಟಕಕ್ಕೆ ಯಾವುದೇ ಹಿನ್ನಡೆಯಲ್ಲ, ಬದಲಿಗೆ ರಾಜ್ಯಕ್ಕೆ "ನ್ಯಾಯ" ಸಿಕ್ಕಿದೆ ಎಂದು ಉಪಮುಖ್ಯಮಂತ್ರಿ ಮತ್ತು ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬೆಂಗಳೂರಿನಲ್ಲಿ ಸುಪ್ರೀಂಕೋರ್ಟ್ ತೀರ್ಪಿಗೆ ಪ್ರತಿಕ್ರಿಯೆ ನೀಡಿದ ಅವರು ಮೇಕೆದಾಟು ಕರ್ನಾಟಕದ ಮಹತ್ವದ ಯೋಜನೆ "ಇದು ನಮ್ಮ ಹಕ್ಕು ಮತ್ತು ನಮ್ಮ ನೀರು ನಾವು ಯಾರಿಗೂ ಅಡ್ಡಿ ಮಾಡುತ್ತಿಲ್ಲ. ತಮಿಳುನಾಡಿಗೆ ಲಾಭ ಆಗಲಿದೆ. ಕೋರ್ಟ್ ಆದೇಶದ ಪ್ರಕಾರ ಅವರಿಗೆ ಸಾಕಷ್ಟು ನೀರು ಸಿಗಲಿದೆ. ನಾವು ಯೋಜನೆಯನ್ನು ಮುಂದುವರಿಸಲೇಬೇಕು. ಇದು ನಮ್ಮ ಪ್ರದೇಶದಲ್ಲಿ ನಿರ್ಮಾಣವಾಗುತ್ತಿದೆ. ಇದು ಬೆಂಗಳೂರಿನ ಜನರ ವಿಜಯ" ಎಂದರು.

ತಮಿಳುನಾಡು ರಾಜ್ಯವು ಕೋರ್ಟ್ ಅನುಮೋದಿಸಿದ ಯೋಜನೆಯನ್ನು ಜಾರಿಗೊಳಿಸಲು ಸಹಕರಿಸಿ ಒಟ್ಟಾಗಿ ಕೆಲಸ ಮಾಡಬೇಕು ಎಂದು ಕೋರಿದರು. "ಕೋರ್ಟ್ ತೀರ್ಪಿನಿಂದ ಕರ್ನಾಟಕಕ್ಕೆ ನ್ಯಾಯ ಸಿಕ್ಕಿದೆ.

# ನ್ಯೂಯಾರ್ಕ್‌ನಲ್ಲಿ ಜೋಹ್ರಾನ್ ಮಮ್ದಾನಿ ಗೆಲುವು

## ಒಬ್ಬ ಸಮಾಜವಾದಿಯ ಜಯದಿಂದ ಬದಲಾಗುತ್ತಿರುವ ಅಮೇರಿಕದ ನಗರ ರಾಜಕಾರಣ

**ಅ**ಮೇರಿಕ ಒಕ್ಕೂಟದ ನ್ಯೂಯಾರ್ಕ್ ನಗರ ಎಂದರೆ ಬದಲಾವಣೆಯ ನಗರ. ಆದರೆ ಈ ಬಾರಿ ಬದಲಾವಣೆಯ ಗಾಳಿ ರಾಜಕೀಯ ಮತಪೆಟ್ಟಿಗೆಯಿಂದ ಬಂತು. ಕೇವಲ 34 ವರ್ಷದ ವಯಸ್ಸಿನಲ್ಲೇ ಜೋಹ್ರಾನ್ ಮಮ್ದಾನಿ ಎಂಬ ಯುವ ರಾಜಕಾರಣಿ ತನ್ನನ್ನು 'ಡೆಮಾಕ್ರಟಿಕ್ ಸೋಶಲಿಸ್ಟ್' ಎಂದು ಪರಿಚಯಿಸಿಕೊಂಡು – ನ್ಯೂಯಾರ್ಕ್ ನಗರದ ಮೇಯರ್ ಸ್ಥಾನವನ್ನು ಅತಿ ತೀಕ್ಷ್ಣವಾದ ಮತ್ತು ಪ್ರತಿಷ್ಠ ಚುನಾವಣೆಯಲ್ಲಿ ಮೇಯರ್ ಸ್ಥಾನವನ್ನು ಗೆದ್ದಿದ್ದಾರೆ.

ಆ ಗೆಲುವು ಕೇವಲ ರಾಜಕೀಯ ಘಟನೆ ಅಲ್ಲ, ಇದು ಅಮೇರಿಕದ ಅತ್ಯಂತ ದೊಡ್ಡ ನಗರದಲ್ಲಿ ಸಾಮಾಜಿಕ ಅಲೆ ಮತ್ತು ರಾಜಕೀಯ ಗಾಳಿಯ ಬದಲಾವಣೆಯ ಸೂಚನೆ. ಅಮೇರಿಕಾದಲ್ಲಿ ಅದರಲ್ಲೂ ನ್ಯೂಯಾರ್ಕ್ ನಗರದಲ್ಲಿ ಅತ್ಯಂತ ದುಬಾರಿ ಮತ್ತು ಹಣದುಬ್ಬರದ ಈ ಚುನಾವಣೆ ಜನರ ಬದುಕಿನ ಖರ್ಚು, ಅಸಮಾನತೆ, ಮತ್ತು ಆಶೆಯ ಮಧ್ಯೆ ಹುಟ್ಟಿದ ಹೊಸ ಸಂವೇದನೆ.

ಅತ್ಯಂತ ದುಬಾರಿ ಮತ್ತು ಹಣದುಬ್ಬರದ ಜನರ ಬದುಕಿನ ಹೋರಾಟವೇ ಹೊಡೆತಕ್ಕೆ ಈ ಚುನಾವಣೆಯ ಅಭಿಯಾನದ ಕೇಂದ್ರಬಿಂದುವಾಗಿತ್ತು ಎಂದರೆ ಅತಿಶಯೋಕ್ತಿಯಲ್ಲ.

ಈ ಹೊಸಪೀಳಿಗೆಯ ವಲಸೆ ಜನರ ಪ್ರತಿನಿಧಿ ಮಮ್ದಾನಿಯ ಘೋಷಣೆ ಸರಳವಾಗಿತ್ತು. 'ನ್ಯೂಯಾರ್ಕ್ ಮತ್ತೆ ಬದುಕಲು ಸಾಧ್ಯವಾಗುವ ನಗರವಾಗಲಿ' ಎಂದು ಆಶಿಸುವ ಎನ್ನುತ್ತಾ, ಅವರು ಬಾಡಿಗೆ ಏರಿಕೆಯಿಂದ ನಲುಗುತ್ತಿರುವ ಕುಟುಂಬಗಳು, ಸಾರಿಗೆ ಸಂಚಾರದ ವೆಚ್ಚದಿಂದ ಕಂಗೆಟ್ಟ ಕಾರ್ಮಿಕರು ಮತ್ತು ಒಂದೊಂದು ನಗರದಿಂದ ಹೊರಹಾಕಲ್ಪಡುವ ವಲಸೆಗಾರರ ಯುವ ಪೀಳಿಗೆಯ ಆತಂಕ ಮತ್ತು ಅನಿಶ್ಚಿತೆಯ ಬದುಕುವ ಜನರ ಪರ ನಿಂತರು.



ಅವರು ತಮ್ಮ ಪ್ರತಿಚುನಾವಣೆ ಪ್ರಚಾರ ಕಾರ್ಯಕ್ರಮದಲ್ಲಿ ಬಾಡಿಗೆ ಏರಿಕೆ ಸ್ಥಗಿತ, ಉಚಿತ ಬಸ್ ಮೆಟ್ರೋ ಪ್ರಯಾಣ, ಮಕ್ಕಳ ಆರೈಕೆ ಕೇಂದ್ರಗಳ ವಿಸ್ತರಣೆ, ಸರ್ಕಾರ ನಡೆಸುವ ಆಹಾರ ಮಳಿಗೆಗಳು, ಮತ್ತು ಶ್ರೀಮಂತರ ಮೇಲೆ ಹೆಚ್ಚುವರಿ ತೆರಿಗೆ–ಮುಂತಾದ ಯೋಜನೆಗಳು ಬಗ್ಗೆ ವಿಪುಲವಾಗಿ ಚರ್ಚಿಸುತ್ತಾ, ಭರವಸೆಗಳ ಮಹಾಪೂರ ಪ್ರಚುರಪಡಿಸಿದರು. ಪ್ರತಿಸ್ಪರ್ಧಿಗಳು ಇದನ್ನು ಅಸಾಧ್ಯವೆಂದು ಕರೆದರೂ, ಜನರು ಅದನ್ನು ಬಲವಾಗಿ ನಂಬಿ ನಿಜವಾದ ಬದಲಾವಣೆಯ ಪ್ರಣಾಳಿಕೆಯೆಂದು ನಂಬಿದರು ಮತ್ತು ಮಮ್ದಾನಿ ಪರ ಮತಚಲಾಯಿಸಿದರು.

ಈ ಅಭಿಯಾನಕ್ಕೆ ದೊಡ್ಡ ಹಣದ ಪ್ರಚಾರವಿರಲಿಲ್ಲ. ಬದಲಿಗೆ ಸಾವಿರಾರು ಯುವಕರು, ಮಹಿಳೆಯರು ಮತ್ತು ವಿದ್ಯಾರ್ಥಿಗಳು 22ನೆ ಶತಮಾನದ ಭಾಗ್ಯದ ಬಾಗಿಲು ತಟ್ಟಿದ ಜನಶಕ್ತಿ ಚಳವಳಿಯಂತಿತ್ತು.

ಅವರ ಪ್ರಮುಖ ಎದುರಾಳಿ, ಮಾಜಿ ರಾಜ್ಯಪಾಲ ಆಂಡ್ರೂ ಕುವೊಮೊ, ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರೂ ಜನರ ಕಣ್ಣಲ್ಲಿ ಹಳೆಯ ವ್ಯವಸ್ಥೆಯ ಪ್ರತಿನಿಧಿಯಾಗಿದ್ದ, ಹಳೆಯ ಹಗರಣಗಳು, ಆಡಳಿತದ ಅಸಮರ್ಥತೆ ಮತ್ತು ಬಾಡಿಗೆ ಸಂಕಷ್ಟದ ನಡುವಿನ ನಿರ್ಲಕ್ಷ್ಯವು ಅವರಿಗೆ ಭಾರವಾಗಿ ಅವರ ಸೋಲಿಗೆ ಕಾರಣವಾಯಿತು.

ಹೊಸ ಕಾಲದ ಮೇಯರ್ ಗೆಲುವಿನ ರಾತ್ರಿ ಕ್ವೀನ್ಸ್‌ನಲ್ಲಿ ಮಾತನಾಡಿದ ಮಮ್ದಾನಿ ಹೇಳಿದರು. "ನಾವು ಕ್ರಾಂತಿಕಾರಿಗಳು ಅಲ್ಲ – ನಾವು ವಾಸ್ತವವಾದಿಗಳು, ಕ್ರಾಂತಿ ಎಂದರೆ, ಈ ಸ್ಥಿತಿ ಎಂದೆಂದಿಗೂ ಮುಂದುವರಿಯಬಹುದು ಎಂದು ನಂಬುವುದು"

ಜನವರಿ ಕೆಳ ಅಧಿಕಾರಕ್ಕೆ ಬರುತ್ತಿರುವ ಮಮ್ದಾನಿಗೆ ಅತಿ ದೊಡ್ಡ ಸವಾಲು–ತಮ್ಮ ಘೋಷಣೆಗಳನ್ನು ನಿಜಗೊಳಿಸುವುದು. ಬಜೆಟ್ ಕೊರತೆ ನಿವಾರಿಸುವುದು, ಮನೆಗಳ ಕೊರತೆ ನಿವಾರಿಸುವುದು, ಪರಿಸರ ಹಾನಿ–ಇವೆಲ್ಲದರ ನಡುವೆಯೂ ಉಚಿತ ಸೇವೆಗಳ ನಿರ್ವಹಣೆ ಸುಲಭವಲ್ಲ. ಆದರೆ ಬೆಂಬಲಿಗರ ನಂಬಿಕೆ ಏನೆಂದರೆ, ಅವರ ನೈತಿಕ ನಿಲುವು ಮತ್ತು ಜನಪರ ಮನೋಭಾವ ನಗರವನ್ನು ಹೊಸ ದಾರಿಗೆ ತರುತ್ತದೆ ಎಂಬ ಆಶಾವಾದ. ಲಂಡನ್‌ನ ಮೇಯರ್ ಸಾದಿಕ್ ಖಾನ್ ಸೇರಿದಂತೆ ಹಲವು ಜಾಗತಿಕ ನಾಯಕರು ಈ ಗೆಲುವನ್ನು 'ಹೊಸ ಪೀಳಿಗೆಯ ನಗರ ಚಳವಳಿ ಎಂದು ಕೊಂಡಾಡಿದರು. ಅಮೇರಿಕದ ಪ್ರಗತಿಪರ ಡೆಮಾಕ್ರಟಿಕ್ ನಾಯಕರಾದ ಅಲೆಕ್ಸಾಂಡ್ರಿಯಾ ಒಕಾಸಿಯೋ–ಕೋರ್ಟ್‌ಜ್ ಕೂಡ ಈ ಗೆಲುವನ್ನು ಜನಶಕ್ತಿ ರಾಜಕೀಯದ ಜಯ" ಎಂದು ಹೇಳಿದರು. ಮಮ್ದಾನಿಯ ಯಶಸ್ಸು ಈಗ ಅಮೇರಿಕದ ಇತರ ನಗರಗಳಿಗೂ ಪ್ರೇರಣೆ ನೀಡಬಹುದು ಎಂಬ ವಿಶ್ಲೇಷಣೆಗಳು ಕೇಳಿ ಬರುತ್ತಿವೆ.

ಇವೆಲ್ಲದರ ನಡುವೆ ಮಮ್ದಾನಿ ಹೊಸ ಪೀಳಿಗೆಯ ಆಶೆಯನ್ನು ಪ್ರತಿನಿಧಿಸುತ್ತಿದ್ದರು, ಅವರ ಗೆಲುವು ಮತದಾರರ ಸಿಡಿಲಿನಂತೆ ಪರಿಣಮಿಸಿತು. 18 ರಿಂದ 45 ವರ್ಷದ ಮಹಿಳೆಯರು ಮತ್ತು ಯುವ ಮತದಾರರು ಮಮ್ದಾನಿಯ ಗೆಲುವಿನ ಕೀಲಿ ಎನಿಸಿದರು. ವಲಸಿಗ ಸಮುದಾಯಗಳು ಅವರ ಕಥೆಯೊಂದಿಗೆ ತಮ್ಮನ್ನು ಗುರುತಿಸಿಕೊಂಡವರು ಉಗಾಂಡಾದಿಂದ ಬಂದ ಭಾರತೀಯ ಮೂಲದ ಪೋಷಕರ ಮಗ, ಕ್ವೀನ್ಸ್‌ನಲ್ಲಿ ಬೆಳೆದ ಯುವ ನಾಯಕ ಜನರ ಬೆಂಬಲದಿಂದಲೇ ಬಂದ ವಿಜಯವೆಂದು ಮತಪೆಟ್ಟಿಗೆ ಅರ್ಧ ಫಲಿತಾಂಶ ಹೊರಬೀಳುತ್ತಿದ್ದಂತೆ ಖಚಿತವಾಗ ತೊಡಗಿತು. ಈ ಮಮ್ದಾನಿಯವರ ತಮ್ಮ ಮೇಯರ್ ಗಿರಿಯ ಐದು ವರ್ಷದ ಅಧಿಕಾರ ಅವಧಿಯಲ್ಲಿ ಯಾವ ರೀತಿ ಜನರ ಆಶೋತ್ತರಗಳನ್ನು ಪೂರೈಸುತ್ತಾರೆಂದು ಕಾಲಘಟ್ಟದಲ್ಲಿ ಕಾದುನೋಡಬೇಕಿದೆ.

# ಬೆಂಗಳೂರಿನ ಗುರುದತ್ ಹಿಂದಿ ಚಿತ್ರರಂಗದ ಧ್ರುವತಾರೆ

**ಭಾ**ರತೀಯ ಚಿತ್ರರಂಗದ ನೂರು ವರ್ಷಗಳ ಇತಿಹಾಸದಲ್ಲಿ ಅದರಲ್ಲೂ ಹಿಂದಿ ಚಿತ್ರರಂಗದ ಸುವರ್ಣ ಯುಗವೆಂಬ 50–60ರ ದಶಕದ ಚಿತ್ರಗಳ ಸರಣಿಯಲ್ಲಿ ಕನ್ನಡಿಗ ಮತ್ತು ಅದರಲ್ಲೂ ಬೆಂಗಳೂರಿನ ಗುರುದತ್ ಹೆಸರು ಜಗತ್‌ಪ್ರಸಿದ್ಧರ ಸಾಲಿನಲ್ಲಿ ಸದಾ ಹಚ್ಚಹಸಿರಾಗಿ ನಿಲ್ಲುತ್ತದೆ. ಗುರುದತ್ ಎಂಬ ವಸಂತ ಕುಮಾರ್ ಶಿವಶಂಕರ ಪಡುಕೋಣೆ ಜುಲೈ 9, 1925ರಂದು ಬೆಂಗಳೂರಿನಲ್ಲಿ ಜನಿಸಿದ ಕರ್ನಾಟಕ ಕನ್ನಡ ಕೊಂಕಣಿ ಗೌಡ ಸಾರಸ್ವತ ಬ್ರಾಹ್ಮಣ ಕುಟುಂಬದ ಅಪ್ಪಟ ಸಂಪ್ರದಾಯ ಕುಟುಂಬದ ಪ್ರತಿಭಾನ್ವಿತ ಕೂಸು. ಸ್ವಾತಂತ್ರ್ಯ ಪೂರ್ವ ಬ್ರಿಟಿಷ್ ಆಡಳಿತದ ಬೆಂಗಾಲಿನಲ್ಲಿ 16 ವರ್ಷಗಳು ಕಲ್ಕತ್ತಾದಲ್ಲಿ ಬೆಳೆದ ನಂತರ ಮುಂದೆ ಮುಂಬೈ ಚಿತ್ರರಂಗದ ಭವಿಷ್ಯ ಹುಡುಕಿಕೊಂಡು ಕಡಲ ನಗರಕ್ಕೆ ಕಾಲಿಟ್ಟರು.

1944ರಲ್ಲಿ ಪ್ರಭಾತ್ ಫಿಲ್ಮ್ ಕಂಪನಿಯಲ್ಲಿ ನೃತ್ಯ ನಿರ್ದೇಶಕರಾಗಿ ಗುರುದತ್ ಅವರ ಸಿನಿ ಪ್ರಯಾಣವು ಪ್ರಾರಂಭವಾಯಿತು. 1951ರಲ್ಲಿ ಅವರ ಸ್ನೇಹಿತ ದೇವ್ ಆನಂದ್ ನಿರ್ಮಿಸಿದ ಬಾಜಿ ಚಿತ್ರದ ಮೂಲಕ ನಿರ್ದೇಶನಕ್ಕೆ ಪಾದಾರ್ಪಣೆ ಮಾಡಿದರು. ಅವರ ಚಲನಚಿತ್ರಗಳು ತಮ್ಮ ಕಾವ್ಯಾತ್ಮಕ ಕಥೆ, ಬೆಳಕಿನ ನವೀನ ಬಳಕೆ ಮತ್ತು ಪ್ರೀತಿ, ಪ್ರೇಮವೈಫಲ್ಯ ಮತ್ತು ಸಾಮಾಜಿಕ ಭ್ರಮನಿರಸನವುಳ್ಳಂತಹ ಚಿತ್ರಕಥೆಗಳೊಂದಿಗೆ ಸಮ್ಮಿಳಿತವಾಗಿ ಮತ್ತು ಅಸ್ತಿತ್ವವಾದದ ಆತಂಕದಂತಹ ವಿಷಯಗಳ ಅನ್ವೇಷಣೆಗಾಗಿ ಪ್ರಸಿದ್ಧಿಯಾಗಿವೆ.

ಅತ್ಯಂತ ಜನಪ್ರಿಯವಾದ ಮತ್ತು ವಿಶ್ಲೇಷಕರ ಮನಗೆದ್ದ 'ಪ್ಯಾಸ್' ಚಿತ್ರವು 1957ರಲ್ಲಿ ಬಿಡುಗಡೆಗೊಂಡು ಹಿಂದಿ ಪ್ರೇಕ್ಷಕರ ಮತ್ತು ವಿಮರ್ಶಕರ ಮನಸೂರೆಗೊಂಡಿತು. ಈ ಚಿತ್ರಕಥೆಯು ಒಬ್ಬ ಭ್ರಮನಿರಸನಗೊಂಡ ಕವಿಯ ಕಟುವಾಸ್ತವ ಮತ್ತು ಭಾವನಾತ್ಮಕ ಮಿಡಿತ ಕಥಾ ಹಂದರ ಹೊಂದಿತ್ತು. ಇಂದಿಗೂ ಈ ಚಲನಚಿತ್ರವನ್ನು ಭಾರತೀಯ ಚಿತ್ರರಂಗದ ಶ್ರೇಷ್ಠ ಚಿತ್ರಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ.



ಈ ಚಿತ್ರವು ಅಮೇರಿಕಾದ ಪ್ರಸಿದ್ಧ ಟೈಮ್ ನಿಯತಕಾಲಿಕೆಯ ಸಾರ್ವಕಾಲಿಕ 100 ಶ್ರೇಷ್ಠ ಚಲನಚಿತ್ರಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ.

ನಂತರ ಕಾಗಜ್ ಕೆ ಫೂಲ್ (1959) ಚಿತ್ರವು ಮಾನವನ ಉನ್ನತಿ ಮತ್ತು ಪತನದ ಬಗ್ಗೆ ಅರೆ–ಆತ್ಮಚರಿತ್ರೆಯು ನಿರೂಪಣೆಯುಳ್ಳ ದ್ದಾಗಿದ್ದು, ಇದರ ನವೀನ ನಿರೂಪಣೆ ಮತ್ತು ದೃಶ್ಯ ಶೈಲಿಗೆ ಎಲ್ಲರ ಮೆಚ್ಚುಗೆ ಪಡೆದಿದ್ದರು ಆರಂಭಿಕ ಬಾಕ್ಸ್ ಆಫೀಸ್ ಯಶಸ್ಸುಗಳಿಸದೆ ನಂತರ ವರ್ಷಗಳಲ್ಲಿ ಬಿಡುಗಡೆಗೊಂಡು ಭರ್ಜರಿ ಯಶಸ್ವಿಚಿತ್ರ ಎಂದು ಎನಿಸಿಕೊಂಡು ಚಲನಚಿತ್ರೋತ್ಸವಗಳಲ್ಲಿ ಭಾರತದ ಶ್ರೇಷ್ಠ ಚಿತ್ರವೆಂದು ಗುರುತಿಸಲ್ಪಟ್ಟಿದೆ.

ಮುಂದೆ 1962ರಲ್ಲಿ ಗುರುದತ್‌ರವರು ಸಾಹಿಬ್ ಬೀಬಿ ಔರ್ ಗುಲಾಮ್ ಚಿತ್ರವನ್ನು ದತ್ ನಿರ್ಮಿಸಿದ್ದರೂ, ಈ ಚಿತ್ರವನ್ನು ಅಬ್ರಾರ್ ಅಲ್ವಿ ನಿರ್ದೇಶಿಸಿದ್ದಾರೆ. ಇದು ಜಮೀನ್ದಾರರ ಕುಟುಂಬದ ಅವನತಿಯ ಕಥೆಯನ್ನು ವಿವರಿಸುತ್ತದೆ. ಸಂಪತ್ತಿನ ಬಲವಾದ ಪ್ರದರ್ಶನಗಳು ಮತ್ತು ವಾತಾವರಣದ ಕಥೆಗಾರಿಕೆಗೆ ಹೆಸರುವಾಸಿಯಾಗಿದೆ.

ತೆಲುಗು ಚಿತ್ರರಂಗದ ಮತ್ತು ಆಂಧ್ರ ಪ್ರದೇಶದ ವಹಿದಾ ರೆಹಮಾನ್ ಎಂಬ ನೂತನ ನಾಯಕಿಯ ಸೌಂದರ್ಯಕ್ಕೆ ಮೆಚ್ಚಿ ಆಕೆಯನ್ನು ತನ್ನ ಚಿತ್ರಕ್ಕೆ ನಾಯಕಿಯಾಗಿ ಪರಿಚಯಿಸಿದ ಮತ್ತು ಅಂದಿನ ದಿನಗಳಲ್ಲಿ ಅತಿ ಅದ್ಭುತವಾಗಿ ಚಿತ್ರೀಕರಣಗೊಂಡ ಚಿತ್ರವೆಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದು 1960ರ ಚೌಧ್ವಿನ್ ಕಾ ಚಾಂದ್ ಚಿತ್ರ. ಈ ಚಿತ್ರವು ಮೊಘಲ್ ಭಾರತದ ಹಿನ್ನೆಲೆಯ ರೊಮ್ಯಾಂಟಿಕ್ ಭಾವಗೀತಾತ್ಮಕ ಕಥೆಯಿಂದ, ನಾಯಕಿ–ನಾಯಕರ ಭಾವನಾತ್ಮಕ ಒಡನಾಟ ಮತ್ತು ಅವರಿಬ್ಬರ ತೆರೆಯ ಮೇಲಿನ ರೊಮ್ಯಾಂಟಿಕ್ ಕೆಮಿಸ್ಟ್ರಿಗೆ ಹೆಸರುವಾಸಿ ಯಾಗಿ, ಗುರುದತ್ ವಹಿದಾ ಪ್ರೇಮಯಾನದ ರಸಸುದ್ದಿಗಳು ಆ ಕಾಲಘಟ್ಟದ ಪತ್ರಿಕೆಗಳಲ್ಲಿ ಗಾಳಿಸುದ್ದಿಗೆ ಎಡೆಮಾಡಿಕೊಟ್ಟಿತ್ತು. ಇವರಿಬ್ಬರ ಈ ರೊಮ್ಯಾಂಟಿಕ್ ಕೆಮಿಸ್ಟ್ರಿಯಿಂದ ಪ್ರೇರೇಪಿತವಾದ, ಅತಿ ಅದ್ಭುತವಾಗಿ ಚಿತ್ರೀಕರಣಗೊಂಡ ಇಂದಿಗೂ ಪಡ್ಡೆ ಹುಡುಗರ ಹುಚ್ಚೆಬ್ಬಿಸುವ ಮೊಹಮ್ಮದ್ ರಫಿ ಮಧುರ ಕಂಠದಿಂದ ಹಾಡಲ್ಪಟ್ಟ ಸುಮಧುರ ಪ್ರೇಮಿಗಳ ಗೀತೆ ಎಂದೇ ಪ್ರಸಿದ್ಧವಾದ "ಚೌಧನಿಕ ಚಾಂದ್ ಹೈ, ಹೋ ರಾತ್..." ಇದು ಎಲ್ಲಾ ಚಿತ್ರರಸಿಕರಿಗೂ ಅಂದಿಗೂ, ಇಂದಿಗೂ ಗುನಗುಡುವಂತೆ ಮೂಡಿ ಬಂದು ಗಾಢ ಪರಿಣಾಮವನ್ನುಂಟು ಮಾಡಿದ ಅದ್ಭುತ ರಸಕಾವ್ಯ, ಗುರುದತ್‌ರ ಸ್ವತಃ ವಹಿದಾರೊಂದಿಗೆ ನಟಿಸಿದ ಈ ಗೀತೆ ಭೂಮಿ ಇರುವವರೆಗೂ ಅಜರಾಮರ ದೃಶ್ಯಕಾವ್ಯವಾಗಿ ಉಳಿಯುತ್ತದೆ. ತನ್ನ ಚಿತ್ರ ವೃತ್ತಿ ಜೀವನಕ್ಕೆ ಅಪಾರ ಬೆಂಬಲ ಮತ್ತು ಸಹಾಯ ನೀಡಿ ತನ್ನ ಸೌಂದರ್ಯಕ್ಕೆ ಆಕರ್ಷಣೆಯ ಮಿಂಚು ಮತ್ತು ಸೊಬಗನ್ನು ನೀಡಿದ ಗುರುದತ್ತರ ಸವಿನೆನಪಿಗಾಗಿ ತಮ್ಮ ಉಳಿದ ಜೀವನವನ್ನು ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯ ತಮ್ಮ ನೆಚ್ಚಿನ ಫಾರ್ಮ್‌ಹೌಸಿನಲ್ಲಿ ಗುರುವಿನ ನೆನಪಿನಲ್ಲಿ ಕಾಲ ಕಳೆದರು.

ಗುರುದತ್ ಅವರ ಚಲನಚಿತ್ರಗಳು ಅವುಗಳ ಆಳವಾದ ಭಾವನಾತ್ಮಕ ಸಂಬಂಧ ಗಳು ವ್ಯಕ್ತಪಡಿಸುವುದರೊಂದಿಗೆ ಅನಾವರಣ ಗೊಂಡ ಸಂಕೀರ್ಣ ಪಾತ್ರಗಳು ಮತ್ತು ನವೀನ ಛಾಯಾಗ್ರಹಣದಿಂದ ನಿರೂಪಿಸಲ್ಪಟ್ಟಿದ್ದವು. ಅವರು ಆಗಾಗ್ಗೆ ಛಾಯಾಗ್ರಾಹಕ ವಿ.ಕೆ. ಮೂರ್ತಿಯವರೊಂದಿಗೆ ಹಲವಾರು ಬಾರಿ ಚರ್ಚಿಸಿ ಚಿತ್ರೀಕರಣ ದೃಶ್ಯಗಳನ್ನು ಅಂತಿಮವಾಗಿ ಅದ್ಭುತವಾಗಿ ಮೂಡಿಬರುವಂತೆ ಕೆಲಸ ಮಾಡುತ್ತಿದ್ದರು. ಅವರು ತಮ್ಮ ಕಥೆಗಳ ನಿರೂಪಣೆಯ ಆಳವನ್ನು ಹೆಚ್ಚಿಸುವ ಚಿತ್ರೀಕರಣ ಕೋನಗಳಿಂದ ಮತ್ತು ಅತ್ಯುತ್ತಮ ಆಕರ್ಷಕವಾದ ಸಂಗೀತ–ಸಾಹಿತ್ಯ ಸಂಯೋಜನೆಗಳನ್ನು ಚಿತ್ರಕಥೆಯಲ್ಲಿರುವಂತೆ ನೋಡಿಕೊಂಡರು. ಅವರ ಈ ನಿಪುಣತೆಯ ಕೆಲಸವು ವಿಶ್ವದಾದ್ಯಂತ ಚಲನಚಿತ್ರ ನಿರ್ಮಾಪಕರು ಮತ್ತು ಸಿನಿಪ್ರಿಯರಿಗೆ ಇಂದಿಗೂ ಸ್ಫೂರ್ತಿ ನೀಡುತ್ತಲೇ ಇದೆ.

ಗುರುದತ್ ಅವರ ವೈಯಕ್ತಿಕ ಜೀವನವು ಚೇತೋಹಾರಿಯಾಗಿದ್ದರೂ ದುರಂತ ಅಂತ್ಯವೆಂಬ ದಂತಕಥೆ ಇತಿಹಾಶ ಪುಟಗಳಲ್ಲಿದೆ. ಅವರು 1964ರ ಅಕ್ಟೋಬರ್ 10ರಂದು ನಿಗೂಢ ಪರಿಸ್ಥಿತಿಯಲ್ಲಿ ನಿಧನರಾದರು, ಮಿತಿಮೀರಿದ ಮಧ್ಯ ಸೇವನೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಅಂದಿನ ಪತ್ರಿಕೆಗಳು ವರದಿ ಮಾಡಿದ್ದವು. ತಮ್ಮ 39ನೇ ವಯಸ್ಸಿನಲ್ಲಿ ಅವರ ಅಕಾಲಿಕ ನಿಧನವು ಭಾರತೀಯ ಚಿತ್ರರಂಗದ ಮೇಲೆ ಶಾಶ್ವತವಾದ ಪರಿಣಾಮವನ್ನು ಬೀರಿತು.

ಅವರ ಸಂಕ್ಷಿಪ್ತ ವೃತ್ತಿಜೀವನದ ಹೊರತಾಗಿಯೂ, ಅವರ ಚಲನಚಿತ್ರಗಳು ಕಾಲಾತೀತ ಶ್ರೇಷ್ಠ ಚಿತ್ರಗಳಾಗಿ ಉಳಿದಿವೆ ಮತ್ತು ಚಿತ್ರಕತೆಯ ಕಲಾತ್ಮಕ ನಿರೂಪಣೆಯ ಪರಂಪರೆಯು ಪೂರ್ವಾನ್ವಯ ಮತ್ತು ಪಾಂಡಿತ್ಯಪೂರ್ಣ ಅಧ್ಯಯನಗಳ ಮೂಲಕ ಉಳಿಯುತ್ತದೆ. ಇಂದಿಗೂ ವಿಶ್ವ ಮತ್ತು ಭಾರತ ಚಿತ್ರರಂಗದ ಪ್ರತಿ ಸಭೆ–ಸಮಾರಂಭ ಮತ್ತು ಚಲನಚಿತ್ರೋತ್ಸವಗಳಲ್ಲಿ ಅವರ ಚಿತ್ರಗಳ ಚರ್ಚೆ, ವಿಶ್ಲೇಷಣೆ, ಸಂವಾದ ಮತ್ತು ಪ್ರದರ್ಶನಗಳು ಏರ್ಪಾಡು ಮಾಡಿ ಈ ಅಗಲಿದ ಪ್ರತಿಭಾನ್ವಿತ ಚೇತನಕ್ಕೆ ತಮ್ಮ ಕೃತಜ್ಞತೆ ಮತ್ತು ಎಲ್ಲಾ ಚಿತ್ರರಂಗದ ಗಣ್ಯರು ಮತ್ತು ಸಾಮಾನ್ಯರು ನೀವಾಳಿ ಅರ್ಪಿಸುತ್ತಾರೆ. ಇದು ನಮ್ಮ ಕನ್ನಡಿಗರೆಲ್ಲರ ಮತ್ತು ಬೆಂಗಳೂರಿನ ಹೆಮ್ಮೆಯ ವಿಷಯವಾಗಿರುತ್ತದೆ.

# ಆಧಾರ್ ನಾಗರಿಕತೆಯ ಪುರಾವೆಯಲ್ಲ: ಚುನಾವಣಾ ಆಯೋಗ

**ನ**ವದೆಹಲಿ: ವಿಶೇಷ ತೀವ್ರ ಪರಿಷ್ಕರಣ (ಎಸ್‌ಐಆರ್) ಕಾರ್ಯಕ್ರಮದ ಎರಡನೇ ಹಂತದಲ್ಲಿ ಆಧಾರ್ ಕಾರ್ಡ್ ಅನ್ನು ಕೇವಲ "ಗುರುತಿನ ಪುರಾವೆ" ಎಂದು ಮಾತ್ರ ಅಂಗೀಕರಿಸಲಾಗುವುದು ಮತ್ತು ಅದು "ನಾಗರಿಕತೆಯ ದೃಢಪಡಿಸುವ ಪುರಾವೆ" ಅಲ್ಲ ಎಂದು ಚುನಾವಣಾ ಆಯೋಗ (ಇಸಿಐ) ಸ್ಪಷ್ಟಪಡಿಸಿದೆ.

ಈ ಹಂತದ ಕಾರ್ಯಕ್ರಮವು 9 ರಾಜ್ಯಗಳಲ್ಲಿ ಸುಮಾರು 51 ಕೋಟಿ ಮತದಾರರನ್ನು ಒಳಗೊಂಡಿದೆ. ಚುನಾವಣಾ ಆಯೋಗವು ತನ್ನ ಶಪಥಪತ್ರದ ಮೂಲಕ ಇದನ್ನು ಸ್ಪಷ್ಟಪಡಿಸಿದ್ದು, "ಆಧಾರ್ ಎಂಬುದು ಚುನಾವಣಾ ಪಟ್ಟಿಯಲ್ಲಿ ಸೇರ್ಪಡೆ ಅಥವಾ ತೆಗೆದುಹಾಕುವುದಕ್ಕೆ ಪುರಾವೆಯಲ್ಲ. ಇದನ್ನು ಕೇವಲ ಗುರುತಿನ ಪುರಾವೆಯಾಗಿ ಮಾತ್ರ ಅನುಮತಿಸಲಾಗುವುದು, ನಾಗರಿಕತೆಯ ಪುರಾವೆಯಾಗಿ ಅಲ್ಲ" ಎಂದು ಹೇಳಿದೆ.

ಇದಕ್ಕೆ ಮುನ್ನ, ವಕೀಲ ಅಶ್ವಿನಿ ಉಪಾಧ್ಯಾಯ ಅವರು ಸಲ್ಲಿಸಿದ ಜನಹಿತ ಅರ್ಜಿಯಲ್ಲಿ, "ಮತದಾರರ ಪಟ್ಟಿಗಳಲ್ಲಿ ಸೇರ್ಪಡೆ–ಪರಿಷ್ಕರಣೆಗೆ ಆಧಾರ್ ಅನ್ನು ಬಳಸಬಾರದು ಮತ್ತು ಅದನ್ನು ಕೇವಲ ಗುರುತಿನ ಪುರಾವೆಯಾಗಿ ಮಾತ್ರ ಬಳಸಬೇಕು" ಎಂದು ಭಾರತದ ಸುಪ್ರೀಂಕೋರ್ಟ್‌ನಲ್ಲಿ ವಾದಿಸಿದ್ದರು. ಇಸಿಐಯು ತನ್ನ ಜವಾಬಿನಲ್ಲಿ ಸುಪ್ರೀಂಕೋರ್ಟ್ ಸೆಪ್ಟೆಂಬರ್ 9ರ ತೀರ್ಪನ್ನು ಉಲ್ಲೇಖಿಸಿ, ಮತದಾರರ ಪಟ್ಟಿಯಲ್ಲಿ ಗುರುತಿನ ಪುರಾವೆಯಾಗಿ ಮಾತ್ರ ಆಧಾರ್ ಅನ್ನು ಬಳಸಲಾಗುವುದೆಂದು ದೃಢಪಡಿಸಿದೆ.

ಎಸ್‌ಐಆರ್ ಕಾರ್ಯಕ್ರಮದ ಈ ಎರಡನೇ ಹಂತವು ಛತ್ತೀಸ್‌ಗಡ, ಗೋವಾ, ಗುಜರಾತ್, ಕೇರಳ, ಮಧ್ಯಪ್ರದೇಶ, ರಾಜಸ್ಥಾನ, ತಮಿಳುನಾಡು, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ ಸೇರಿದಂತೆ ಒಂಬತ್ತು ರಾಜ್ಯಗಳು ಮತ್ತು ಅಂಡಮಾನ್ ಮತ್ತು ನಿಕೋಬಾರ್, ಲಕ್ಷದ್ವೀಪ್ ಮತ್ತು ಪುದುಚೇರಿ ಕೇಂದ್ರಾಡಳಿತ ಪ್ರದೇಶಗಳಿಗೆ ಅನ್ವಯಿಸುತ್ತದೆ. ಈ ಕಾರ್ಯಕ್ರಮವು 321 ಜಿಲ್ಲೆಗಳು ಮತ್ತು 1,843 ವಿಧಾನಸಭಾ ಕ್ಷೇತ್ರಗಳಲ್ಲಿ ನಡೆಯುತ್ತಿದೆ.

ಮತದಾರರು ತಮ್ಮ ಹೆಸರು ಮತ್ತು ಸಂಬಂಧಿಕರ ಹೆಸರುಗಳನ್ನು ಹಿಂದಿನ ಮತದಾರರ ಪಟ್ಟಿಯಲ್ಲಿ ಪರಿಶೀಲಿಸಲು https://voters.eci.gov.in/ ವೆಬ್‌ಸೈಟ್ ಭೇಟಿ ನೀಡಬಹುದು.



ಸಹಾಯಕ್ಕಾಗಿ, ಮತದಾರರು ಈಸಿಐ ನೆಟ್ ಅಪ್ಲಿಕೇಶನ್‌ನಲ್ಲಿ 'ಬುಕ್–ಎ–ಕಾಲ್ ವಿತ್ ಬಿಎಲ್‌ಒ' ಸೌಲಭ್ಯವನ್ನು ಬಳಸಬಹುದು ಅಥವಾ ಟೋಲ್–ಫ್ರೀ ಹೆಲ್ಪ್‌ಲೈನ್ ಸಂಖ್ಯೆ 1950 (ತಮ್ಮ ಎಸ್ಟಿಡಿ ಕೋಡ್ ಸಹ) ಡಯಲ್ ಮಾಡಬಹುದು. ಮತದಾರರ ಪಟ್ಟಿ ಪರಿಷ್ಕರಣೆಯ ಈ ಹಂತದಲ್ಲಿ, ಬೂತ್ ಲೆವೆಲ್ ಅಧಿಕಾರಿಗಳು (ಬಿಎಲ್‌ಒ) ಮನೆ–ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಿದ್ದಾರೆ ಎಂದು ಆಯೋಗ ತಿಳಿಸಿದೆ.

# ಭಾರತ–ಆಸ್ಟ್ರೇಲಿಯಾ 2025 ಟಿ20 ಸರಣಿ

**ಭಾ**ರತ 2–1ರಿಂದ ಆಸ್ಟ್ರೇಲಿಯಾವನ್ನು ಮಣಿಸಿ ಟಿ20 ಸರಣಿ ಕಬಳಿಕೆ ಅಚ್ಚುಕಟ್ಟಾದ ಪ್ರದರ್ಶನ ತೋರಿದ ಯುವಕರ ತಂಡಗಳು ಮಳೆ ವ್ಯತ್ಯಯ ತಂದರೂ ಭಾರತ ಮೇಲುಗೈ ಸಾಧಿಸಿತು. ಭಾರತ–ಆಸ್ಟ್ರೇಲಿಯಾ ಕ್ರಿಕೆಟ್ ಕದನಕ್ಕೆ ಮತ್ತೊಂದು ರೋಚಕ ಅಧ್ಯಾಯ ಸೇರ್ಪಡೆಯಾಯಿತು.



ಆಸ್ಟ್ರೇಲಿಯಾ ಭೂಮಿ ಯಲ್ಲಿ ನಡೆದ ಐದು ಪಂದ್ಯಗಳ ಟಿ20 ಸರಣಿ ಯಲ್ಲಿ ಭಾರತವು 2–1ರಿಂದ ಗೆಲುವು ದಾಖಲಿಸಿ, 2026ರ ವಿಶ್ವಕಪ್‌ಗಿಂತ ಮುನ್ನ ತನ್ನ ಸಿದ್ಧತೆ ಬಲಿಷ್ಠವಾಗಿರುವುದನ್ನು ತೋರಿಸಿತು.

ಸರಣಿಯ ಆರಂಭವೇ ಮಳೆ ವ್ಯತ್ಯಯಕ್ಕೆ ಗುರಿಯಾಗಿ, ಕ್ಯಾನ್‌ಬೆರಾದ ಪ್ರಥಮ ಟಿ20 ಪಂದ್ಯ ರದ್ದಾಯಿತು. ಉತ್ತಮ ವೇಗದಲ್ಲಿ ಬ್ಯಾಟಿಂಗ್ ಮಾಡುತ್ತಿದ್ದ ಭಾರತಕ್ಕೆ ಮಳೆ ತಡೆದರೂ, ಆ ಸನ್ನಿವೇಶ ತಂಡದ ನಂಬಿಕೆ ಕುಗ್ಗಿಸಲಿಲ್ಲ.

ಮೆಲ್ಬರ್ನ್‌ನಲ್ಲಿ ನಡೆದ ಎರಡನೇ ಟಿ20 ಪಂದ್ಯವನ್ನು ಆಸ್ಟ್ರೇಲಿಯಾ ಗೆದ್ದು ಮುನ್ನಡೆ ಪಡೆದಿತು. ಭಾರತದ ಬ್ಯಾಟಿಂಗ್ ಲಘು ಕುಸಿತಕ್ಕೊಳಗಾಗಿ ಎದುರಾಳಿಯ ಗುರಿ ತಗ್ಗಿದ ಕಾರಣ ಆ ಪಂದ್ಯದಲ್ಲಿ ಆಸ್ಟ್ರೇಲಿಯಾ ಸುಲಭ ಜಯ ಕಂಡಿತು.

ಆದರೆ ಹೋಬಾರ್ಟ್‌ನಲ್ಲಿ ಭಾರತ ತಿರುವು ತಂದುಕೊಂಡಿತು. ಆಸ್ಟ್ರೇಲಿಯಾ ನೀಡಿದ 187 ರನ್‌ಗಳ ಗುರಿಯನ್ನು ಭಾರತ 18.3 ಓವರ್‌ಗಳಲ್ಲಿ ಸಾಹಸಿಕವಾಗಿ ಸಾಧಿಸಿತು.

Washington Sundar ಅವರ ಜ್ವಲಂತ ಆಟ ಮತ್ತು Arshdeep Singh ಅವರ ಸಮರ್ಪಕ ಬೌಲಿಂಗ್ ಭಾರತಕ್ಕೆ ಅಗತ್ಯವಾದ ಧೈರ್ಯ ತುಂಬಿತು. ಈ ಗೆಲುವು ಸರಣಿಗೆ ಹೊಸ ತಿರುವು ತಂದುಕೊಟ್ಟಿತು.


ಗೋಲ್ಡ್ ಕೋಸ್ಟ್‌ನಲ್ಲಿ ನಡೆದ ನಾಲ್ಕನೇ ಪಂದ್ಯದಲ್ಲಿ ಭಾರತ ಮತ್ತೊಮ್ಮೆ ಸಮತೋಲನದ ಕ್ರಿಕೆಟ್ ಪ್ರದರ್ಶಿಸಿತು. ಮಧ್ಯಮ ಗುರಿಯನ್ನು ದಾಖಲಿಸಿದ ಬಳಿಕ ಭಾರತೀಯ ಸ್ಪಿನ್ ಪಡೆ ಆಸ್ಟ್ರೇಲಿಯಾ ಬ್ಯಾಟಿಂಗ್ ಸಾಲು ಸಂಪೂರ್ಣವಾಗಿ ಕುಸಿಯುವಂತೆ ಮಾಡಿತು. Washington Sundar ಮತ್ತು Axar Patel ತಾಂತ್ರಿಕ ಬೌಲಿಂಗ್ ಮೂಲಕ ಆಸ್ಟ್ರೇಲಿಯಾಗೆ 48 ರನ್‌ಗಳ ಭಾರೀ ಸೋಲು ನೀಡಿದರು. ಈ ಜಯದೊಂದಿಗೆ ಭಾರತ ಸರಣಿಯಲ್ಲಿ ಮುನ್ನಡೆ ಪಡೆದಿತು.

ಬ್ರಿಸ್ಬೇನ್‌ನಲ್ಲಿ ನಿಗದಿಯಾಗಿದ್ದ ಐದನೇ ಟಿ20 ಪಂದ್ಯವೂ ಮಳೆಯಿಂದ ರದ್ದಾದ್ದರಿಂದ, ಭಾರತ 2–1 ರಿಂದ ಸರಣಿಯನ್ನು ತನ್ನದಾಗಿಸಿತು.

ಈ ಸರಣಿಯಲ್ಲಿ ಯುವ ಬ್ಯಾಟ್ಸ್‌ಮನ್‌ಗಳ ಶಾಂತ ಪ್ರದರ್ಶನ, ಸ್ಪಿನ್ನರ್‌ಗಳ ಪ್ರಭಾವಿ ಬೌಲಿಂಗ್ ಮತ್ತು ಒಟ್ಟಾರೆ ತಂಡದ ಸಮ್ಮಿಳಿತ ಆಟ ಗಮನಾರ್ಹವಾಗಿತ್ತು.

ಆಸ್ಟ್ರೇಲಿಯಾ ಚೇಸಿಂಗ್‌ನಲ್ಲಿ ಸ್ಥಿರತೆಯನ್ನು ಕಾಣದೆ ಹೋರಾಡಿದರೆ, ಭಾರತ ತನ್ನ ತಂತ್ರ ಮತ್ತು ಶಿಸ್ತು ಮೂಲಕ ಆಸ್ಟ್ರೇಲಿಯಾ ನೆಲದಲ್ಲೇ ಮೇಲುಗೈ ಸಾಧಿಸಿತು.

ಸರಣಿ ಜಯವು ಭಾರತಕ್ಕೆ ವಿಶ್ವಕಪ್‌ಗೆ ಮುನ್ನ ಹೊಸ ಆತ್ಮವಿಶ್ವಾಸ ನೀಡಿದ್ದು, ದೇಶದ ಕ್ರಿಕೆಟ್ ಅಭಿಮಾನಿಗಳಿಗೆ ಮತ್ತೊಂದು ಗರ್ವದ ಕ್ಷಣ ಒದಗಿಸಿದೆ.




Editor & Editorial Board, Publisher and Owned by Janaki Vijayakumar # 555, 17th Cross, SBM Colony, Srinivasanagar, Banashankari, Bengaluru-560050. Printed At : M/s Apoorva Printers & Publishers, 179, Suggata Road, H.M. Halli, Bengaluru-562157.